ಇನ್ನಷ್ಟು ಸ್ಥಳೀಯ ಸುದ್ದಿಗಳು ಪುಟ 09 ರಲ್ಲಿ

ಕನ್ನಡಪ್ರಭ ಬುಧವಾರ 6.05.2026

ಗರಿಷ್ಠ 34°c | ಕನಿಷ್ಠ 23°c

ಸುದ್ದಿ ಸಿಂಚನ

8ಕ್ಕೆ ಬಯೋಟಿಕ್ ಚಿಕಿತ್ಸೆ ಕುರಿತು ವಿಚಾರ ಸಂಕಿರಣ

ಮೈಸೂರು: ಜೆಎಸ್ಎಸ್ ಔಷಧ ವಿಜ್ಞಾನ ಕಾಲೇಜಿನಲ್ಲಿ ಮೇ 8ರಂದು ಸೂಕ್ಷ್ಮಜೀವಿ ನಿರೋಧಕ ಪ್ರತಿರೋಧದ ಯುಗದಲ್ಲಿ ನಿಖರ ಆಂಟಿ ಬಯೋಟಿಕ್ ಚಿಕಿತ್ಸೆ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಸಹ ಸಂಘಟನಾ ಸಮಿತಿ ಅಧ್ಯಕ್ಷ ಡಾ.ಜಿ.ವಿ. ಪೂಜಾರ್ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಳಗ್ಗೆ 11ಕ್ಕೆ ವಿಚಾರ ಸಂಕಿರಣ ಆರಂಭವಾಗಲಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯವಹಿಸುವರು. ಡಾ. ಪ್ರಶಾಂತ್ ವಿಶ್ವನಾಥ್, ಡಾ.ಡಿ. ನಾರಾಯಣಪ್ಪ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಎಲ್‌ಸಿ- ಎಂಎಸ್, ಎಂಎಸ್ ಆಧಾರಿತ ಔಷಧ ಶಾಸ್ತ್ರ ವಿಶ್ಲೇಷಣೆ, ವಿಶೇಷ ತಂತ್ರಾಂಶ ಬಳಸಿದ ಪಿಕೆ, ಪಿಡಿ ಸಿಮ್ಯುಲೇಷನ್ ಮತ್ತು ತಳಿ ವಿಜ್ಞಾನದ ಸ್ಕ್ರೀನಿಂಗ್ ಕುರಿತು ಪ್ರಾತ್ಯಕ್ಷಿಕೆ ಇರಲಿದೆ ಎಂದರು. ಮಲೇಷ್ಯಾ ಸರ್ಕಾರದ ಆರೋಗ್ಯ ಸಚಿವಾಲಯದ ಕ್ಲಿನಿಕಲ್ ಫಾರ್ಮಸಿಸ್ಟ್ ಡಾ. ಜಿಯಾನ್ ನಿನ್ ವರ್ಚುಯಲ್ ಮೂಲಕ ಉದ್ಘಾಟಿಸುವರು. ಎಸ್. ಮಹೇಶ್, ಡಾ. ಅಖಿಲಾ, ಆರ್.ಎಸ್. ಸವಿತಾ ಇದ್ದರು.

ಎಲ್.ರೇವಣ್ಣಗೆ ಪಿಎಚ್.ಡಿ

ಮೈಸೂರು: ಡಾ.ಎಂ.ಜಿ. ಹನುಮಂತರಾಜು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ಎಲ್.



ರೇವಣ್ಣ ಅವರು ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂ ರು ವಿಶ್ವವಿದ್ಯಾನಿಲಯ ಅಂಗೀಕರಿಸಿ ರಾಜ್ಯಶಾಸ್ತ್ರ ವಿಷಯಕ್ಕೆ ಪಿಎಚ್.ಡಿ ಪದವಿ ನೀಡಿದೆ.

ಪಿ.ಕೆ.ಸುದೀಪ್‌ಗೆ ಪಿಎಚ್.ಡಿ

ಮೈಸೂರು: ಡಾ.ಎಸ್.ವೆಂಕಟೇಶನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ಪಿ.ಕೆ.



ಸುದೀಪ್ ಅವರು ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಅಂಗೀಕರಿಸಿ ಮನೋವಿಜ್ಞಾನ ವಿಷಯಕ್ಕೆ ಪಿಎಚ್.ಡಿ ಪದವಿ ನೀಡಿದೆ. ಪಿ.ಕೆ. ಸುದೀಪ್ ಅವರು ಜೆಎಸ್ಎಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯಲ್ಲಿನ ಚಿಕಿತ್ಸಾ ಮನೋವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಿ.ಶ್ರೇಯಾಗೆ ಶೇ.98 ಅಂಕ

ಮೈಸೂರು: ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಹೆಬ್ಬಾಳ್ ನಲ್ಲಿರುವ ಶ್ರೀ ಜ್ಞಾನೇಶ್ವರಿ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ ಬಿ. ಶ್ರೇಯಾ ಶೇ. 98 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಇಂಗ್ಲಿಷ್, ಹಿಂದಿ-100 ಅಂಕಗಳಿ ಸಂಸ್ಥೆಗೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾಳೆ. ಶಾಲೆಗೆ. ಶೇ. 96 ಫಲಿತಾಂಶ ಲಭಿಸಿದೆ. 11 ವಿದ್ಯಾರ್ಥಿಗಳು ಪ್ರಥಮ, 3 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲಾ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಉಪನ್ಯಾಸ ಕಾರ್ಯಕ್ರಮ

ಮೈಸೂರು: ನಗರದ ದಕ್ಷ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂಬಿಎ ವಿದ್ಯಾರ್ಥಿಗಳಿಗಾಗಿ ಮಾರುಕಟ್ಟೆ ತಂತ್ರಗಳ ಕುರಿತು ಉಪನ್ಯಾಸ ಆಯೋಜಿಸಿತ್ತು. ಕೆ.ಆರ್. ಶ್ಯಾಮ್ ಪ್ರಸಾದ್‌ಅವರು ಈ ಉಪನ್ಯಾಸ ನೀಡಿದರು. ಮಾರುಕಟ್ಟೆ ವಿಧಿಗಳು, ಸಂಕಷ್ಟ ಎದುರಿಸುವಿಕೆ ಮುಂತಾದ ವಿಷಯಗಳ ಕುರಿತು ತಿಳಿಸಿಕೊಟ್ಟರು.

ಕಬಿನಿ ಜಲಾಶಯ ನೀರಿನ ಮಟ್ಟ

ಇಂದಿನ ಮಟ್ಟ	2256.75 (6.16)
ಒಳಹರಿವು	97 ಕ್ಯುಸೆಕ್
ಹೊರಹರಿವು	700 ಕ್ಯುಸೆಕ್
ಗರಿಷ್ಠ ಮಟ್ಟ	2284 ಅಡಿ



ಮೈಸೂರಿನ ಟಿಪ್ಪು ಸುಲ್ತಾನ್ ಶಹೀದ್ ಅವರ 234ನೇ ವರ್ಷದ ಗಂಧದ ಉರುಸ್ ಶರೀಫ್‌ನ ಆಮಂತ್ರಣ ಪತ್ರಿಕೆ ಮತ್ತು ಪೋಸ್ಟರ್ ಅನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆಗೊಳಿಸಿದರು. ಇದೇ ವೇಳೆ ಮುಸ್ಲಿಂ ಸಮಾಜದ ಧಾರ್ಮಿಕ ಮುಖಂಡರು ಇದ್ದರು.



ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಮೈಸೂರು ಜಿಲ್ಲೆಯ ಪ.ಜಾತಿ ಭೋವಿ ಜನಾಂಗದ ನಿರುದ್ಯೋಗಿಗಳಿಗೆ ಉಚಿತ ಹೊಲಿಗೆ ತರಬೇತಿಯನ್ನು ವಿದ್ಯಾರಣ್ಯಪುರಂನ ಕೌಶಲ್ಯ ಕರ್ನಾಟಕ ತರಬೇತಿ ಕೇಂದ್ರದಲ್ಲಿ ಶ್ರೀಇಮ್ಮಡಿ ಸಿದ್ದೇಶ್ವರ ಸ್ವಾಮೀಜಿ ಚಾಲನೆ ನೀಡಿದರು. ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಂ, ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮಪ್ರಸಾದ್ ಇದ್ದರು.

ಉದ್ಯೋಗಾವಕಾಶ ಅನ್ವೇಷಣೆ ಮುಕ್ತ ದಿನ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಟಿಎಂಇ ಕಾಲೇಜಿನಲ್ಲಿ ಮೇ 9ರಂದು ಎಂಜಿನಿಯರಿಂಗ್ ಉದ್ಯೋಗಾವಕಾಶ ಅನ್ವೇಷಣೆಯ ಮುಕ್ತ ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಂಶುಪಾಲ ಡಾ.ಎಲ್.ಬಸವರಾಜ್ ತಿಳಿಸಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು, ಪಿಯುಸಿ ಉತ್ತೀರ್ಣರಾದವರು, ಡಿಪ್ಲೊಮಾ ವಿದ್ಯಾರ್ಥಿಗಳು, ಪೋಷಕರು ಬೆಳಗ್ಗೆ 9ಕ್ಕೆ ಆರಂಭವಾಗಿ ಸಂಜೆವರೆಗೂ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಈ ವೇಳೆ ಎಟಿಎಂಇ ವಿದ್ಯಾಸರೆ ವಿದ್ಯಾರ್ಥಿವೇತನ ಕುರಿತು ಮಾಹಿತಿ ನೀಡಲಾಗುವುದು. ಪಾಲ್ಗೊಂಡವರಿಗೆ ಕ್ಯಾಂಪಸ್ ಟೂರ್, ನೇರ ಪ್ರಾಜೆಕ್ಟ್ ಪ್ರದರ್ಶನ, ಸಂವಾದ, ಸಾಂಸ್ಕೃತಿಕ ಚಟುವಟಿಕೆ, ಮನರಂಜನಾ ಆಟಗಳು, ಸೃಜನಾತ್ಮಕ ವಿಡಿಯೋಗ್ರಫಿ ಸ್ಪರ್ಧೆಗಳು ಕೂಡ ಇರಲಿವೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. 50 ಸಾವಿರ ರು. ಮೌಲ್ಯದ ಬಹುಮಾನ ಗೆಲ್ಲಲು ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ಮೊ. 90369 26363ನ್ನು ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ಸಚ್ಚಿದಾನಂದಮೂರ್ತಿ, ಡಾ.ಕೆ. ಶ್ರೀನಿವಾಸ್, ಡಾ.ಎಲ್. ರಾಘವೇಂದ್ರ ಇದ್ದರು.

ಸಿದ್ಧಗಂಗಾಶ್ರೀ ನಿಜವಾದ ವಿಶ್ವಗುರು

ಡಾ.ಶಿವಕುಮಾರ ಸ್ವಾಮೀಜಿಗೆ ಭಾರತ ರತ್ನ ನೀಡಬೇಕು: ಎಚ್.ವಿ. ರಾಜೀವ್ ಆಗ್ರಹ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರು ನಿಜವಾದ ವಿಶ್ವಗುರು ಇಂದು ಎಂಡಿಎ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಬಣ್ಣಿಸಿದರು.

ಜೆ.ಪಿ. ನಗರದ ಶಿವಶಕ್ತಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್ ನಗರದ ಶ್ರೀ ರಾಜೇಂದ್ರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂಸ್ಥೆಯ 2ನೇ ವಾರ್ಷಿಕೋತ್ಸವ, ಬಸವ, ಅಕ್ಕಮಹಾದೇವಿ ಹಾಗೂ ಶಿವಕುಮಾರ ಸ್ವಾಮೀಜಿ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜಾತಿ, ಮತ ನೋಡದೆ ಎಲ್ಲರಿಗೂ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಶಿಕ್ಷಣ, ಅನ್ನ ದಾಸೋಹ ನೀಡಿದ್ದಾರೆ. ನಿಜವಾದ ವಿಶ್ವಗುರು ಅವರು. ಅವರಿಗೆ ಭಾರತ ರತ್ನ ನೀಡಬೇಕು ಎಂದು ಹಲವರು ಒತ್ತಾಯಿಸಿದ್ದಾರೆ. ಆದರೆ ಭಾರತ ರತ್ನಕ್ಕಿಂತ ಮಿಗಿಲಾದ ಜೀವನವನ್ನು ಸಾಗಿಸಿ, ಸಾಧಿಸಿ ಹೋಗಿದ್ದಾರೆ ಎಂದರು.



ಮೈಸೂರಿನ ಜೆ.ಪಿ. ನಗರದ ಶಿವಶಕ್ತಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್ ನಗರದ ಶ್ರೀ ರಾಜೇಂದ್ರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂಸ್ಥೆಯ 2ನೇ ವಾರ್ಷಿಕೋತ್ಸವ, ಬಸವ, ಅಕ್ಕಮಹಾದೇವಿ ಹಾಗೂ ಶಿವಕುಮಾರ ಸ್ವಾಮೀಜಿ ಜಯಂತಿಯಲ್ಲಿ ಪ್ರತಿಭಾ ಪುರಸ್ಕಾರ ಮತ್ತು ಸಾಧಕರನ್ನು ಸನ್ಮಾನಿಸಲಾಯಿತು. ಶ್ರೀ ಗುರುಶಾಂತ ಸ್ವಾಮೀಜಿ, ಎಚ್.ವಿ. ರಾಜೀವ್, ಡಿ.ಜಿ. ಸೋಮಶೇಖರಮೂರ್ತಿ, ಎಂ. ಚಂದ್ರಶೇಖರ್, ರೇಣುಕಾರಾಜು, ಶಾರದಾ ಸತ್ಯನಾರಾಯಣ ಮೊದಲಾದವರು ಇದ್ದರು.

ಬಸವಣ್ಣನವರು ಸಮಾಜದಲ್ಲಿದ್ದ ತಪ್ಪುಗಳನ್ನು ತಿದ್ದಿ ಸಮ ಸಮಾಜ ನಿರ್ಮಿಸಲು ಯತ್ನಿಸಿದರು. ಬಸವಣ್ಣ ಅವರ ಚಿಂತನೆಗಳು ಸರ್ವರೂ ಒಪ್ಪುವಂತಿದೆ. ಬಸವಣ್ಣ ನಮ್ಮ ನಾಡಿನವರು ಎಂಬುದು ಹೆಮ್ಮೆಯ ವಿಚಾರ. 12ನೇ ಶತಮಾನದ ಜಡ್ಡುಗಟ್ಟಿದ ವ್ಯವಸ್ಥೆಯಲ್ಲಿ ಮೂಢನಂಬಿಕೆ, ಮಡಿವಂತಿಕೆ ತೀವ್ರವಾಗಿದ್ದ ವೇಳೆ ಜಗಜ್ಯೋತಿ ಬಸವಣ್ಣ ಅವರು ಎಲ್ಲಾ ವರ್ಗದ ದಾರ್ಶನಿಕರಿರನ್ನು ಒಟ್ಟುಗೂಡಿಸಿ ಸಮಾಜ ಪರಿವರ್ತಿಸಲು ಪ್ರಯತ್ನಿಸಿದ್ದಾಗಿ ಅವರು ಹೇಳಿದರು.

ಶ್ರೀಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಂಜನಗೂಡಿನ ಅನುರಾಗ ಮಕ್ಕಳ ಮನೆ ಅಧ್ಯಕ್ಷ ಸೋಮಶೇಖರಮೂರ್ತಿ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ರೇಣುಕಾರಾಜು, ಸಮಾಜ ಸೇವಕಿ ಶಾರದಾ ಸತ್ಯನಾರಾಯಣ ಮೊದಲಾದವರು ಇದ್ದರು.

ಯುದ್ಧ-ಶಾಂತಿ ಕುರಿತು ವ್ಯಂಗ್ಯ ಚಿತ್ರಕಲಾ ಪ್ರದರ್ಶನ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಬ್ಯಾಂಟರ್‌ಬಾಬು ಪಬ್ಲಿಕೇಷನ್ ವತಿಯಿಂದ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ವ್ಯಂಗ್ಯಚಿತ್ರಕಾರ ಎಂ.ವಿ. ನಾಗೇಂದ್ರ ಬಾಬು ರಚಿತ ಯುದ್ಧ ಹಾಗೂ ಶಾಂತಿ ವ್ಯಂಗ್ಯ ಚಿತ್ರಕಲಾ ಪ್ರದರ್ಶನ ನಡೆಯಿತು.

ವ್ಯಂಗ್ಯ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದ ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಅಧಿಕಾರಕ್ಕೂ ಮುನ್ನ ಜಾತಿ ಬೇಡ, ಅಧಿಕಾರ ಸಿಕ್ಕ ಮೇಲೆ ಜಾತಿ ಎನ್ನುವ ಅಂಶ ಬಿಂಬಿಸಲಾಗಿದೆ. ಸವಾಲುಗಳನ್ನು ಪಕ್ಕಕ್ಕಿಟ್ಟು ಧ್ಯೇಯಕ್ಕಾಗಿ ಬಾಬು ಅವರು ಸಾಗುತ್ತಿರುವುದು ಒಳ್ಳೆಯದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಒಂದಕ್ಕಿಂತ ಒಂದು ವ್ಯಂಗ್ಯಚಿತ್ರಗಳು ಪ್ರಸ್ತುತ ಕಾಲಮಾನದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ತಿಳಿಸಿವೆ. ಮಹಿಳಾ ಮೀಸಲಾತಿ, ಮಧ್ಯಪ್ರಾಚ್ಯ ಯುದ್ಧ ಸೇರಿದಂತೆ ಹಲವು ಪ್ರಮುಖ ಅಂಶಗಳನ್ನು ವಿಡಂಬನೆ ಮೂಲಕ ಬಿಡಿಸಲಾಗಿರುವುದು ಹೆಚ್ಚು ಆಕರ್ಷಕ ಹಾಗೂ ಜನರ ಮನಸ್ಸಿನಲ್ಲಿ ಚಿಂತನೆ ಬಿತ್ತಬಲ್ಲದು ಎಂದರು.

ಕಾರ್ಟೂನ್ ಸೂಪರ್‌ಹೀರೋ ಆಂಫಿ ಮ್ಯಾನ್ ಭಿತ್ತಿ ಚಿತ್ರ ಬಿಡುಗಡೆ ಮಾಡಿ ಮಾತನಾಡಿದ ಸವಾಜ ಸೇವಕ ಕೆ. ರಘುರಾಂ ವಾಜಪೇಯಿ, ವಿಶ್ವಕ್ಕೆ ಯುದ್ಧದ ಬದಲಿಗೆ ಶಾಂತಿ ಬೇಕಾಗಿದೆ ಎಂಬುದನ್ನು ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ವಿಡಂಬನಾತ್ಮಕ ವ್ಯಂಗ್ಯಚಿತ್ರಗಳಿಂದ ಪ್ರತಿಪಾದಿಸಿದ್ದಾರೆ ಎಂದರು.

ಹಿರಿಯ ಶಿಲ್ಪಕಲಾವಿದ ಎಲ್.ಶಿವಲಿಂಗಪ್ಪ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ವ್ಯಂಗ್ಯಚಿತ್ರಕಾರ ಎಂ.ವಿ. ನಾಗೇಂದ್ರ ಬಾಬು, ಬ್ಯಾಂಟರ್‌ಬಾಬು ಪಬ್ಲಿಕೇಷನ್ ನ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಆರ್. ಯೋಗನರಸಿಂಹನ್, ಆರ್. ಚಕ್ರಪಾಣಿ, ಸಂಚಾಲಕ ಎನ್. ಅನಂತ್ ಮೊದಲಾದವರು ಇದ್ದರು.

ಕೈಗಳ ಸ್ವಚ್ಛತೆಗೆ ಆದ್ಯತೆ ನೀಡುವುದು ಅತ್ಯಗತ್ಯ

ವಿಶ್ವ ಕೈ ನೈರ್ಮಲ್ಯ ದಿನಾಚರಣೆಯಲ್ಲಿ ಜೆಎಸ್ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ಸಲಹೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಆರೋಗ್ಯಕರ ಜೀವನಕ್ಕೆ ಕೈಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು ಇದು ಕಾಯಿಲೆಗಳನ್ನು ತಡೆಯುವ ಅತ್ಯಂತ ಸರಳ ಮತ್ತು ಪರಿಣಾಮಕಾರಿ ಮಾರ್ಗವಾಗಿದೆ ಎಂದು ಜೆಎಸ್ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ. ಮಧು ಹೇಳಿದರು.

ಜೆಎಸ್ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಕೈ ನೈರ್ಮಲ್ಯ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಸೋಂಕು ಅಥವಾ ಕೀಟಾಣುಗಳು ನಮ್ಮ ದೇಹವನ್ನು ಪ್ರವೇಶಿಸುವುದು ಕೈಗಳ ಮೂಲಕ ಆದ್ದರಿಂದಲೇ ಕೈಗಳ ಸ್ವಚ್ಛತೆಗೆ ಪ್ರಧಾನ ಆದ್ಯತೆ ನೀಡಬೇಕು ಎಂದರು. ವೈದ್ಯರು ರೋಗಿಯನ್ನು ಮುಟ್ಟುವ ಮುನ್ನ ಮತ್ತು ನಂತರ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು, ಇದರಿಂದ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆ ಕಡಿಮೆ ಈ ಅಭ್ಯಾಸವನ್ನು ಎಲ್ಲ ಆರೋಗ್ಯ ಕಾರ್ಯಕರ್ತರು ಕಡ್ಡಾಯವಾಗಿ ರೂಢಿಸಿಕೊಳ್ಳಬೇಕು ಮತ್ತು ಇದರ ಬಗ್ಗೆ ಜಾಗೃತಿ ಮತ್ತು ಅರಿವು ಬಹಳ ಮುಖ್ಯ ಎಂದರು.



ಜೆಎಸ್ಎಸ್ ಆಸ್ಪತ್ರೆಯ ಉಪ ನಿರ್ದೇಶಕಿ ಡಾ. ಸುಮನ ಮಾತನಾಡಿ, ರೋಗ ಹರಡುವುದನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಕೈಗಳನ್ನು ಸ್ವಚ್ಛಗೊಳಿಸಕೊಳ್ಳಬೇಕು, ಆಸ್ಪತ್ರೆಯಲ್ಲಿ ನರ್ಸ್‌ಗಳ ಪಾತ್ರ ಬಹಳ ಪ್ರಮುಖವಾದದ್ದು, ಅವರು ವಾರ್ಡ್‌ಗೆ ಪ್ರವೇಶಿಸುವ ವೈದ್ಯರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಕೈನೈರ್ಮಲ್ಯ ಬಗ್ಗೆ ಜಾಗೃತಿ ಮೂಡಿಸಬೇಕು ಮತ್ತು ಕಡ್ಡಾಯವಾಗಿ ಕೈ ತೊಳೆಯಲು ಹೇಳಬೇಕು ಎಂದರು, ಹಾಗೂ ಕೈ ನೈರ್ಮಲ್ಯ ಬಗ್ಗೆ ಅವರು, ಸ್ವರಚಿತ ಹಾಡಿನ ಮೂಲಕ ಕೈ ತೊಳೆಯುವ ವಿಧಾನವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್ಎಸ್ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಡಿ. ಶ್ರೀನಿವಾಸಮೂರ್ತಿ ಮಾತನಾಡಿ, ಕೈ ನೈರ್ಮಲ್ಯ ಎಂಬ ಪದ ತುಂಬಾ ಚಿಕ್ಕ ವಿಷಯವಾಗಿದ್ದರು ಇದು ಸಾವನ್ನು ತಪ್ಪಿಸುತ್ತದೆ ಎಂದರು.

ನಮ್ಮಿಂದ ಇನ್ನೊಬ್ಬರಿಗೆ ತೊಂದರೆ ಆಗಬಾರದು ಹಾಗೂ ಸೋಂಕು ಇರುವ ವ್ಯಕ್ತಿಯನ್ನು ಮುಟ್ಟಿ ಆ ಸೋಂಕು ನಮ್ಮ ಕೈಗಳಿಂದ ಮತ್ತೊಬ್ಬರಿಗೆ ಹರಡಿ ಅವರ ಪ್ರಾಣಕ್ಕೆ ಕುತ್ತಾಗಬಹುದು ಎಂದರು.

ಆದ್ದರಿಂದ ನಮಗೋಸ್ಕರ ಮತ್ತು ಬೇರೆಯವರಿಗೋಸ್ಕರ ನಾವು ನಮ್ಮ ಕೈಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂದರು. ಕೈಗಳನ್ನು ಸ್ವಚ್ಛಗೊಳಿಸುವುದು ಪ್ರಾಥಮಿಕ ಮತ್ತು ಸುಲಭವಾದ ಮಾರ್ಗವಾಗಿದೆ. ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳ ಹರಡುವಿಕೆಯನ್ನು ತಡೆಯುವ ಮೂಲಕ ಅನೇಕ ಮಾರಣಾಂತಿಕ ಕಾಯಿಲೆಗಳಿಂದ ರಕ್ಷಣೆ ಪಡೆಯಬಹುದು ಎಂದರು.

ಆಸ್ಪತ್ರೆಯ ಸೋಂಕು ನಿಯಂತ್ರಣ ಸಮಿತಿ ಕಾರ್ಯದರ್ಶಿಗಳಾದ ಡಾ. ಕೆ.ಬಿ. ಚೇತಕ್, ನರ್ಸಿಂಗ್ ಸೇವೆಗಳ ಮುಖ್ಯಸ್ಥೆ ಜಾನೆಟ್ ಮಥಿಯಾಸ್ ಇದ್ದರು.

ಅಕ್ರಮವಾಗಿ ಖಾತೆ: ಕಾನೂನು ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಸರ್ಕಾರಿ ಜಾಗಗಳನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಹಾಗೂ ಸಾರ್ವಜನಿಕರ ಕೆಲಸ-ಕಾರ್ಯ ಮಾಡಿಕೊಡದೆ ತೊಂದರೆ ಕೊಡುತ್ತಿರುವ ರಮ್ಮನಹಳ್ಳಿ ಪಪಂ ಮುಖ್ಯಾಧಿಕಾರಿ ಮಹೇಶ್ ಹಾಗೂ ಕಂದಾಯ ನಿರೀಕ್ಷಕ ಮಂಜುನಾಥ್ ಅವರನ್ನು ಅಮಾನತು ಪಡಿಸುವಂತೆ ಒತ್ತಾಯಿಸಿ ಕರ್ನಾಟಕ ಕ್ರಾಂತಿ ಸೇನೆ ಪದಾಧಿಕಾರಿಗಳು ಮಂಗಳವಾರ ಪ್ರತಿಭಟಿಸಿದರು.

ನಗರದ ಹೊರವಲಯದ ರಮ್ಮನಹಳ್ಳಿ ಪಪಂ ಮುಂಭಾಗ ಧರಣಿ ನಡೆಸಿದ ಪ್ರತಿಭಟನಾಕಾರರು, ಪಂಚಾಯಿತಿಯ ಮುಖ್ಯಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ಭೂ ಮಾಫಿಯಾದವರೊಂದಿಗೆ ಶಾಮೀಲಾಗಿ ಬಡ ಜನರಿಗೆ ಮೀಸಲಿರುವ ಸರ್ಕಾರಿ ಜಾಗಗಳನ್ನು ಖಾಸಗಿ ವ್ಯಕ್ತಿಗಳಿಗೆ ಖಾತೆ ಮಾಡಿಕೊಟ್ಟಿದ್ದಾರೆ. ಅಮಾಯಕ ಜನರು ಇವರು ಮಾಡಿಕೊಟ್ಟಿರುವ ಅಕ್ರಮ ಖಾತೆಯ ನಿವೇಶನಗಳನ್ನು ಖರೀದಿಸಿ ತಾವು ಜೀವನವಿಡೀ ಕೂಡಿಟ್ಟಿರುವ ಲಕ್ಷಾಂತರ ರೂ. ಹಣ ಕಳೆದುಕೊಂಡು ಮೋಸ ಹೋಗಿದ್ದಾರೆ ಎಂದು ಆರೋಪಿಸಿದರು.

ಸರ್ಕಾರಿ ಜಾಗಗಳಿಗೆ ಕೆಲವೇ ದಿನಗಳಲ್ಲಿ ಅಕ್ರಮ ಖಾತೆ ಮಾಡಿಕೊಡುವ ಈ ಇಬ್ಬರು ಅಧಿಕಾರಿಗಳು, ಎಲ್ಲವೂ ಸರಿ ಇರುವ ಸ್ವತ್ತುಗಳಿಗೆ ಖಾತೆ ಮಾಡಿಕೊಡದೆ ಜನಸಾಮಾನ್ಯರು, ಬಡವರು, ನಿವೃತ್ತ ಸರ್ಕಾರಿ ನೌಕರರಿಗೆ ತಿಂಗಳುಗಟ್ಟಲೆ ಖಾತೆ ಮಾಡಿಕೊಡದೆ ಕಚೇರಿಗೆ ಅಲೆಸುತ್ತಾ ತೊಂದರೆ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ಕ್ರಾಂತಿ ಸೇನೆ ಅಧ್ಯಕ್ಷ ಎಂ.ಸಿ. ಬಾಬು, ಪದಾಧಿಕಾರಿಗಳಾದ ಇರ್ಫಾನ್, ಅಕ್ಬರ್ ಖಾನ್, ರಮ್ಮನಹಳ್ಳಿ ಮುಖಂಡರಾದ ಗೋವಿಂದ, ವೇಣುಗೋಪಾಲ್, ರಮೇಶ, ಸುರೇಶ್ ಮೊದಲಾದವರು ಇದ್ದರು.

'ವೈಶಿಷ್ಟ್ಯತೆಯಿಂದಾಗಿ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ವಿಭಿನ್ನ'



• **ಕನ್ನಡಪ್ರಭ ವಾರ್ತೆ** ಮೈಸೂರು

ವೈಶಿಷ್ಟ್ಯತೆಯಿಂದ ವಿಭಿನ್ನವಾಗಿರುವ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಎಂದು ಕಥೆಗಾರ್ತಿ ಉಷಾ ನರಸಿಂಹನ್ ಹೇಳಿದರು.

ಶ್ರೀರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಶ್ರೀ ರಾಮಕೃಷ್ಣ ಪರಮಹಂಸರ ವೃತ್ತದ ನೆಲಮಾಳಿಗೆಯಲ್ಲಿ ನಡೆಯುವ ತಿಂಗಳ ತಿಳಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಹೇಗೆ ಭಿನ್ನ ಎಂಬ ವಿಷಯ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುವೆಂಪು ಅವರು ವಾಲ್ಮೀಕಿ ರಾಮಾಯಣದಲ್ಲಿರುವಂತೆ ಮಂಥರೆಯನ್ನ ದುಷ್ಟಳಂತೆ ಬಿಂಬಿಸದೆ, ರಾಮನಿಗಿಂತ ಭರತನ ಮೇಲಿದ್ದ ಅವಳ ಪ್ರೀತಿಯ ದ್ಯೋತಕವೇ ಅವಳ ಆ ನಡವಳಿಕೆಗೆ ಕಾರಣ ಎಂದು ತೋರಿಸಿ ಮಂಥರೆಗೆ ಪದೋನ್ನತಿ ನೀಡಿದ್ದಾರೆ ಎಂದರು. ಹಾಗೆಯೇ ಪ್ರತಿಯೊಬ್ಬ ಕೆಟ್ಟವನಲ್ಲಿಯೂ ಒಳ್ಳೆಯ ಭಾವಗಳಿರುತ್ತವೆ ಎಂಬುದನ್ನು ಪ್ರತಿಪಾದಿಸಿರುವ ಕುವೆಂಪು ಪುರುಷ ಮತ್ತು ಸ್ತ್ರೀ ಸಮಾನತೆಯನ್ನು ಸಾದರಪಡಿಸಿದ್ದಾರೆ ಎಂದರು.

ಮುಂದೆ ನಡೆಯುವ ಅಗ್ನಿಪ್ರವೇಶಕ್ಕೆ ವಾಲ್ಮೀಕಿ ರಾಮಾಯಣದಂತೆ ಸೀತೆಯನ್ನು ಮಾತ್ರ ಇಳಿಸದೆ ರಾಮನನ್ನು ಇಳಿಸಿರುವುದು ವಿಶೇಷ ಎಂದು ಅಭಿಪ್ರಾಯಿಸಿದ ಅವರು, ಸರ್ವೋದಯ ಮತ್ತು ಸಮಾನತೆಯ ಕಾಲಮಾನದಲ್ಲಿದ್ದ ಕುವೆಂಪು ಅವರ ಸಮಾನತೆಯ ತತ್ತ್ವ ಈ ಕೃತಿಯಲ್ಲಿ ಅಭಿವ್ಯಕ್ತಗೊಂಡಿದೆ ಎಂದರು. ಶ್ರೀರಾಮಕೃಷ್ಣ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೆ. ಕೆಂಪಲಿಂಗರಾಜು, ಖಜಾಂಚಿ ಪುರುಷೋತ್ತಂ ಇದ್ದರು. ವಿದುಷಿ ವಸುಧಾ ಅವರಿಂದ ಶಾಸ್ತ್ರೀಯ ಸಂಗೀತ ಏರ್ಪಡಿಸಿತ್ತು.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು: ನಗರದ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್ ನಿಂದ ಮೇ 7ರ ಬೆಳಗ್ಗೆ 10 ರಿಂದ ಸಂಜೆ 8ರವರೆಗೆ ಪ್ರೀತಿ ಕ್ಯಾನ್ಸರ್ ಸೆಂಟರ್ ವತಿಯಿಂದ ಉಚಿತವಾಗಿ ಕ್ಯಾನ್ಸರ್ ತಪಾಸಣಾ ಶಿಬಿರ ಆಯೋಜಿಸಿದೆ. ಮಾಹಿತಿಗಾಗಿ ದೂ. 4259259 ಸಂಪರ್ಕಿಸಬಹುದು.

ವಿಶೇಷ ಉಪನ್ಯಾಸ | ಎಂಎಚ್‌ಬಿ ಸಂಸ್ಥೆಯ ಸ್ಥಾಪಕರು, ಬೊಜ್ಜು ಮುಕ್ತ ಭಾರತ ಅಭಿಯಾನದ ರುವಾರಿ ತಾಪ್ಸಿ ಉಪಾಧ್ಯಾಯ್ ಸಲಹೆ

ಆರೋಗ್ಯಕರ ಜೀವನ ಶೈಲಿ ಕುರಿತು ಹೆಚ್ಚು ಗಮನ ಹರಿಸಬೇಕು

• **ಕನ್ನಡಪ್ರಭ ವಾರ್ತೆ** ಮೈಸೂರು

ಯುವ ಜನತೆ ಆರೋಗ್ಯಕರ ಜೀವನ ಶೈಲಿ ಕುರಿತು ಹೆಚ್ಚು ಗಮನಹರಿಸಬೇಕು ಎಂದು ಮಿಷನ್ ಹೆಲ್ತಿ ಭಾರತ್ (ಎಂಎಚ್‌ಬಿ) ಸಂಸ್ಥೆಯ ಸ್ಥಾಪಕರು ಹಾಗೂ ಬೊಜ್ಜು ಮುಕ್ತ ಭಾರತ ಅಭಿಯಾನದ ರುವಾರಿಗಳಾದ ತಾಪ್ಸಿ ಉಪಾಧ್ಯಾಯ್ ಹೇಳಿದರು.

ನಗರದ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಬೊಜ್ಜು ಮುಕ್ತ ಭಾರತ ಅಭಿಯಾನದಡಿಯಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ಇಂದಿನ ಆಧುನಿಕ ಜೀವನ ಶೈಲಿ ಹಾಗೂ ಆಹಾರ ಸೇವನೆಯು ಜನರನ್ನು ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುವಂತೆ ಮಾಡುತ್ತಿದೆ. ಇದರಿಂದ ಯುವ ಜನತೆ ಚಿಕ್ಕ ವಯಸ್ಸಿನಲ್ಲಿಯೇ ಮಾರಣಾಂತಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ ಎಂದು ತಿಳಿಸಿದರು.

ಮನುಷ್ಯ ತನ್ನ ಆರೋಗ್ಯವನ್ನು ಭಾಗ್ಯ ಎನ್ನುವುದಕ್ಕಿಂತಲೂ ಅದರ ಸ್ಥಾನ ಹೆಚ್ಚಿನದ್ದಾಗಿದೆ. ಪ್ರತಿಯೊಬ್ಬರು ತಮ್ಮ ಆರೋಗ್ಯ ಕಾಳಜಿಗಾಗಿ ಸಮಯ ನೀಡಲೇಬೇಕು. ಇಂದಿನ ಯುವ ಜನತೆ ಅಗತ್ಯವಾಗಿ ತಮ್ಮ ಮುಂದಿನ ಆರೋಗ್ಯಕರವಾದ ಬದುಕಿಗಾಗಿ ಇಂದೇ ಆರೋಗ್ಯದ ಕಾಳಜಿ ಮಾಡಬೇಕಿದೆ. ದೈಹಿಕ ಚಟುವಟಿಕೆ, ಧ್ಯಾನ, ಯೋಗ, ಕರಿದ ಪದಾರ್ಥಗಳು ಹಾಗೂ ಹೊರಗಿನ ತಿಂಡಿಗಳ ತ್ಯಜಿಸುವಿಕೆ, ಮೊಬೈಲ್ ವೀಕ್ಷಣೆಯ ಸಮಯವನ್ನು ಕಡಿತಗೊಳಿಸುವುದು ಹಾಗೂ ಇತರರನ್ನು ಕಾಳಜಿವಹಿಸುವುದರ ಜೊತೆಗೆ ತಮ್ಮ ಆರೋಗ್ಯಕರ ಭಾವನೆಗಳನ್ನು ಇತರರೊಡನೆ ಹಂಚಿಕೊಳ್ಳುವುದು.



ಈ ಪಂಚ ಸೂತ್ರಗಳನ್ನು ಯುವ ಸಮುದಾಯವು ಅನುಸರಿಸಬೇಕು. ರಾಸಾಯನಿಕ ಮುಕ್ತ ಸಾವಯವ ಕೃಷಿಯಿಂದ ಬೆಳೆದ ಆಹಾರ ಪದಾರ್ಥಗಳ ಬಳಕೆಯಿಂದ ನಮ್ಮ ಆರೋಗ್ಯ ಮತ್ತಷ್ಟು ಹೆಚ್ಚುತ್ತದೆ. ಮನೆ ಯ ಆಹಾರ ಪದಾರ್ಥಗಳನ್ನು ಹೊರತು ಪಡಿಸಿ, ಹೊರಗಿನ ಆಹಾರ ಪದಾರ್ಥಗಳ ಸೇವನೆಯನ್ನು ನಿಲ್ಲಿಸಬೇಕು. ಕೆಲವು ಉದ್ಯಮಗಳು ತಮ್ಮ ಲಾಭಕ್ಕಾಗಿ ಕೆಲವು ಡೈರಿ ಉತ್ಪನ್ನಗಳನ್ನು ತಯಾರಿಸುತ್ತಿವೆ. ಅವು ಕೂಡ ಇಂದು ಜನರ ಆರೋಗ್ಯ ಹಾಳುಮಾಡುತ್ತಿವೆ. ಒಳ್ಳೆಯ ಉತ್ಪನ್ನ ಮಾತ್ರ ಆಯ್ಕೆ ಮಾಡಿ ಬಳಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಭಾರತದ ಜನಸಂಖ್ಯೆ ಇಂದು ತೀವ್ರಗತಿಯಲ್ಲಿ ಹೆಚ್ಚುತ್ತಿದ್ದು; ಜನರ ಆರೋಗ್ಯದ ಕಾಳಜಿಗಳು ಕೂಡ ಹೆಚ್ಚಾಗಬೇಕಿದೆ. ಆಧುನಿಕತೆಗೆ ತಕ್ಕಂತೆ ಸಂಪ್ರದಾಯ, ಸಂಸ್ಕೃತಿಯಲ್ಲಿ ಬದಲಾವಣೆಯಾಗುತ್ತಿರುವಂತೆ ಇಂದಿನ ಜನರ ಜೀವನಶೈಲಿಯಲ್ಲಿಯೂ ಆಗುತ್ತಿವೆ. ಅದರಲ್ಲಿ ಆಹಾರ ಪದ್ಧತಿಯೂ ಒಂದು. ಇಂದಿನ ಆಲೋಚನರಹಿತ ಅನಿಯಂತ್ರಿತ ಆಹಾರಕ್ರಮದಿಂದ ಅನೇಕ ರೋಗಗಳಿಗೆ ಜನರು ತುತ್ತಾಗುತ್ತಿದ್ದಾರೆ. ಅದರಲ್ಲಿ ಈ ಅತಿಯಾದ ಬೊಜ್ಜಿನ ಸಮಸ್ಯೆಯು ಒಂದಾಗಿದೆ. ಅತಿಯಾದ ಬೊಜ್ಜಿನಿಂದ ಮಾರಣಾಂತಿಕ ಹೃದಯದ ಸಮಸ್ಯೆಗಳು ಯುವ ವಯಸ್ಕರಲ್ಲಿಯೇ ಕಾಣಿಸುತ್ತಿರುವುದು ಅತ್ಯಂತ ಅಪಾಯಕಾರಿ. ಭಾರತವು ಇಂತಹ ಸಮಸ್ಯೆಗಳಿಂದ ಪಾರಾಗಿ ಆರೋಗ್ಯಯುತ ಹಾಗೂ ಶಕ್ತಿಯುತ ರಾಷ್ಟ್ರವಾಗಬೇಕಾದರೆ ಯುವ ಜನತೆಯಲ್ಲಿ ಆರೋಗ್ಯದ ಕಾಳಜಿ ಹೆಚ್ಚಬೇಕು ಎಂದರು.

ಈ ನಿಟ್ಟಿನಲ್ಲಿ ತಾಪ್ಸಿ ಉಪಾಧ್ಯಾಯ್ ಅವರು ಹಮ್ಮಿಕೊಂಡಿರುವ ಈ ಯೋಜನೆ ದೇಶದ ಯುವ ಜನತೆಗೆ ಅತ್ಯಂತ ಉಪಯುಕ್ತವಾಗಿದೆ. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದರು.

ಪ್ರಭಾರ ಪ್ರಾಂಶುಪಾಲ ಡಾ. ಮಂಜುನಾಥ ಹಾಗೂ ಮಿಷನ್ ಹೆಲ್ತಿ ಭಾರತ್ ಸಹಭಾಗಿಗಳಾಗಿರುವ ಚಿದಾನಂದ ಇದ್ದರು. ಪೂರ್ವಿಕ ಮತ್ತು ಸಹನ ತಂಡ ಪ್ರಾರ್ಥಿಸಿದರು. ಅಧ್ಯಾಪಕ ಎಂ.ಪಿ. ಸೋಮಶೇಖರ್ ಕಾರ್ಯಕ್ರಮ ನಿರ್ವಹಿಸಿದರು. ಅಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಗರ ಕಾರ್ಯಕ್ರಮ 6.5.2026, ಬುಧವಾರ

- **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ:** ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಚರ್ಮ ಆರೈಕೆ ಶಿಬಿರ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ 4.30.
- **ರಾಮಸನ್ಸ್ ಬೊಂಬೆಮನೆ:** ಕ್ರೀಡಾ ಕೌಶಲ್ಯ– ಹಾಸು ಆಟಗಳ ಪ್ರದರ್ಶನ, ಮಾರಾಟ, ನಜರಬಾದ್‌ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7.
- ಸುಯೋಗ್ ಆಸ್ಪತ್ರೆ: ಉಚಿತ ಕೀಲುಮೂಳೆ ತಪಾಸಣೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ ಸಂಜೆ 6.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ಸಿದ್ಧರಾಮೇಶ್ವರ ಜಯಂತಿ, ಸಾನ್ನಿಧ್ಯ– ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ, ಉದ್ಘಾಟನೆ– ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯಅತಿಥಿ– ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಶಿವರಾಜ್ ತಂಗಡಗಿ, ಅಧ್ಯಕ್ಷತೆ– ಶಾಸಕ ಕೆ. ಹರೀಶ್ ಗೌಡ, ಕಲಾಮಂದಿರ, ಬೆಳಗ್ಗೆ 11.
- **ತಾರಾ ಪ್ರಕಾಶನ, ಕನ್ನಡ ಸಾಹಿತ್ಯ ಕಲಾಕೂಟ:** ಡಾ.ಎನ್. ವಾಸಯ್ಯ ಅವರ ವಿಶ್ವೇಶ್ವರಿ ಕೃತಿ ಬಿಡುಗಡೆ– ಪ್ರೊ.ನೀಲಗಿರಿ ಎಂ. ತಳವಾರ್, ಅಧ್ಯಕ್ಷತೆ– ಎಚ್.ವಿ.ರಾಜೀವ್, ಕೃತಿ ಕುರಿತು ಮಾತು– ಡಾ. ಮಾಲಿನಿ ಅಭ್ಯಂಕರ್, ಮುಖ್ಯ ಅತಿಥಿ– ಮೇಘ ರಾಜ್ ನಾಯಕ್, ಎಂ. ಚಂದ್ರಶೇಖರ್, ತ್ಯಾಗರಾಜ ರಸ್ತೆ, ಪತ್ರಕರ್ತರ ಭವನ, ಮಧ್ಯಾಹ್ನ 12.

ಸಾಂಸ್ಕೃತಿಕ

- **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ– ಡಾ. ಸುಕನ್ಯಾ ಪ್ರಭಾಕರ್, ಸರಸ್ವತಿಪುರಂ, 13ನೇ ಮೇನ್ ಲೀಲಾ ನಾಗರಾಜ್ ನಿವಾಸ, ನಂ. 510, ಸಂಜೆ 4 ರಿಂದ 6.

ನಿಡೋ ಹೋಮ್ ಫೈನಾನ್ಸ್ ಲಿಮಿಟೆಡ್

nido HOME FINANCE

(ಹಿಂದೆ ಎಡೆಲ್‌ವೈಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನೋಂದಾಯಿತ ಕಛೇರಿ: ಟವರ್ 3, ವಿಂಗ್''ಬಿ, ಕೊಹಿನೂರ್ ಸಿಟಿ ಮಾಲ್, ಕೊಹಿನೂರ್ ಸಿಟಿ, ಕಿರೋಲ್ ರಸ್ತೆ, ಕುರ್ಲಾ (ಪಶ್ಚಿಮ), ಮುಂಬೈ-400 070. ಶಾಖಾ ಕಛೇರಿ: 2ನೇ ಮಹಡಿ 421/ಎ, 6ನೇ ಬ್ಲಾಕ್, ಕೋರಮಂಗಲ, 80 ಅಡಿ ರಸ್ತೆ, ಬೆಂಗಳೂರು, ಕರ್ನಾಟಕ - 411005.

ಡಿಮಾಂಡ್ ನೋಟೀಸ್ 2002ರ ಸರ್ಫೇಸಿ ಕಾಯಿದೆಯ ಕಲಂ 13(2) ರಡಿ

ಕೆಳಕಂಡಂತೆ ತಿಳಿಸಲಾದ ಸಾಲಗಾರ/ರುಗಳಾದ ನೀವು ನಿಡೋ ಹೋಮ್ ಫೈನಾನ್ಸ್ ಲಿಮಿಟೆಡ್ (ಇನ್ನು ಮುಂದೆ ನಿಡೋ ಎಂದು ಉಲ್ಲೇಖಿಸಲಾಗಿದೆ) (ಹಿಂದೆ ಎಡಲ್‌ವೈಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ನಿಂದ ಸಾಲದ ಅಸಲು ಮತ್ತು ಬಡ್ಡಿ ಮರುಪಾವತಿ ಮಾಡುವಲ್ಲಿ ವಿಫಲರಾಗಿರುವಿರಿ. ಸಾಲದ ಖಾತೆಗಳನ್ನು ನಿಷ್ಕಾರ್ಯ- ಆಸ್ತಿ (ಎನ್‌ಪಿಎ) ಎಂಬುದಾಗಿ ವರ್ಗೀಕರಿಸಲಾಗಿದೆ. ಹೀಗಾಗಿ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ (ಸರ್ಫೇಸಿ ಕಾಯಿದೆ) ಕಲಂ 13(2)ರಡಿ ಸಾಲಗಾರರಿಗೆ ಡಿಮಾಂಡ್ ನೋಟೀಸ್ ಜಾರಿ ಮಾಡಲಾಗಿದೆ. ಮತ್ತು ಕೊನೆಯದಾಗಿ ತಿಳಿದುಬಂದ ಅವರುಗಳ ವಿಳಾಸಗಳಿಗೆ ರವಾನಿಸಲಾಗಿದೆ. ಜೊತೆಗೆ ಸದರಿ ಡಿಮಾಂಡ್ ನೋಟೀಸ್‌ಗಳನ್ನು ಈ ಸಾರ್ವಜನಿಕ ನೋಟೀಸ್ ಮೂಲಕ ಪ್ರಕಟಿಸಿ ಸಾಲಗಾರರ ಮಾಹಿತಿಗಾಗಿ ನೀಡಲಾಗಿದೆ. **ಸಾಲಗಾರರ, ಭದ್ರತೆಗಳ, ಬಾಕಿ ಮೊತ್ತಗಳು ಕಲಂ 13(2)ರಡಿ ಕಳುಹಿಸಿರುವ ಡಿಮಾಂಡ್ ನೋಟೀಸ್‌ನ ಹಾಗೂ ಕ್ಲೈಮ್ ಮಾಡಿರುವ ಮೊತ್ತದ ವಿವರಗಳು ಕೆಳಕಂಡಂತಿವೆ.**

1. ಸಾಲಗಾರರ, ಸಹ ಸಾಲಗಾರರ, ಜಾಮೀನುದಾರರ ಹೆಸರು ಮತ್ತು ವಿಳಾಸ ಮತ್ತು ಸಾಲದ ಮೊತ್ತ:
ಶಿವಕುಮಾರ್ ಬಿ ಎಂ (ಸಾಲಗಾರರು-ಮರಣಹೊಂದಿದ್ದಾರೆ), ಮತ್ತು ಎಂ ದೀಪಾ ಸಹ-ಸಾಲಗಾರರು) (ಮರಣದ ನಂತರದ ಕಾನೂನುಬದ್ಧ ಉತ್ತರಾಧಿಕಾರಿ) ವಾರ್ಡ್ ಸಂಖ್ಯೆ 16, ಸಿಲ್ವರ್ ಜ್ಯುಬಿಲಿ, ಪಾರ್ಕ್ ರಸ್ತೆ, ಕೆ ಆರ್ ನಗರ ಪಟ್ಟಣ ಕೃಷ್ಣರಾಜನಗರ ಅಂಚೆ, ಕೃಷ್ಣರಾಜನಗರ ಜಿಲ್ಲೆ ಮೈಸೂರು- 571602, ಅಲ್ಲದೇ: P No. 2299700930 Ass No 10337/12, ವಾರ್ಡ್ ನಂ. 12 ಲಾಲನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕೆ.ಆರ್.ನಗರ ತಾಲೂಕು ಮೈಸೂರು- 571602
LAN NO: L0740STHL000005334548 **ಸಾಲ ಒಪ್ಪಂದ ದಿನಾಂಕ: 28-06-2024**
ಸಾಲದ ಮೊತ್ತ: 30,00,000/- (ಮೂವತ್ತು ಲಕ್ಷ ರೂ.ಮಾತ್ರ) ಎನ್‌ಪಿಎ ದಿನಾಂಕ: 04.09.2025 ಡಿಮಾಂಡ್ ಸೂಚನೆ ದಿನಾಂಕ:- 17.04.2026
ಬಾಕಿ ಮೊತ್ತ : ರೂ. 33,64,728.47/- (ಮೂವತ್ತಮೂರು ಲಕ್ಷದ ಅರವತ್ತನಾಲ್ಕು ಸಾವಿರದ ಏಳುನೂರ ಇಪ್ಪತ್ತೆಂಟು ರೂ. ಮತ್ತು ನಲವತ್ತೇಳು ಪೈಸೆ ಮಾತ್ರ) ಜೊತೆಗೆ ಡಿಮಾಂಡ್ ಸೂಚನೆ ದಿನಾಂಕ 17.04.2026ರಿಂದ ತದನಂತರದ ಬಡ್ಡಿಯೊಂದಿಗೆ ಬಾಕಿ ಪಾವತಿಸಬೇಕು.

ಷೆಡ್ಯೂಲ್ ಆಸ್ತಿ: ಸಕಲ ಸಮಸ್ತವೂ ಸೇರಿದ ಆಸ್ತಿಯ ವಸತಿ ಮನೆ ಆಸ್ತಿ ಸಂ.2299700930, ಅಸೆಸ್‌ಮೆಂಟ್ ಸಂ.10337/12, ಸೈಟ್ ಸಂ.12, ವಾರ್ಡ್ ಸಂಖ್ಯೆ.12, ಲಾಲನಹಳ್ಳಿ ರಸ್ತೆ, ಕೆ.ಆರ್.ನಗರ ಪಟ್ಟಣ, ಮೈಸೂರು ಜಿಲ್ಲೆ, ನಿರ್ಮಿಸಲಾದ ನಿವೇಶನದ ಅಳತೆ ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 12.20 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ ಅಳತೆ: 9.14 ಮೀ.ಗಳು ಒಟ್ಟು ಸೈಟ್ ವಿಸ್ತೀರ್ಣ 111.5080 ಚದರ ಮೀಟರ್ ಮತ್ತು 88.257850 ಚದರ ಮೀಟರ್ ಆರ್‌ಸಿಸಿ ಛಾವಣಿವುಳ್ಳ ಗ್ರ್ಯಾನೈಟ್ ಫ್ಲೋರಿಂಗ್ ನೆಲಮಹಡಿ ವಸತಿ ಗೃಹ ಕಟ್ಟಡ ವಿದ್ಯುತ್, ನೀರು ಮತ್ತು ನೈರ್ಮಲ್ಯ ಸಂಪರ್ಕಗಳನ್ನು ಹೊಂದಿದೆ, ಇದು ಕೆ.ಆರ್ ನಗರ ಪಟ್ಟಣ ಪುರಸಭೆಯ ಮಿತಿಯಲ್ಲಿ ಬರುತ್ತದೆ, ಸರ್ವೆ ಸಂ.342/2 ಅಳತೆ 1 ಎಕರೆ 22 ಗುಂಟೆಗಳು, ಲಾಲನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ, ಚಕ್ಕುಬಂದಿ - ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 9 ಮತ್ತು 8, ಉತ್ತರಕ್ಕೆ: ಸೈಟ್ ಸಂಖ್ಯೆ 13 ದಕ್ಷಿಣಕ್ಕೆ: ಸೈಟ್ ಸಂಖ್ಯೆ 11. ವಸತಿ ಉದ್ದೇಶಕ್ಕಾಗಿ ಅಭಿವೃದ್ಧಿಗೊಂಡ ಪರಿವರ್ತಿತ ಭೂ ಸರ್ವೆ ಸಂ. 342/1 ಅಳತೆ 1 ಎಕರೆ 38 ಗುಂಟೆ ಮತ್ತು ಭೂಮಿಯ ಸರ್ವೆ ಸಂ. 342/2 ಅಳತೆ 1 ಎಕರೆ 22 ಗುಂಟೆ ಲಾಲನಹಳ್ಳಿ ಗ್ರಾಮದ ಕಸಬಾ ಹೋಬಳಿ, ಕೆ.ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ, **ಚಕ್ಕುಬಂದಿ:- ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ಸಂ. 9 ಮತ್ತು 8, ಉತ್ತರಕ್ಕೆ: ಸೈಟ್ ಸಂ 13 ದಕ್ಷಿಣಕ್ಕೆ: ಸೈಟ್ ಸಂ. 11.**

ಆದುದರಿಂದ ಮೇಲಿನ ಸಾಲಗಾರ/ರು ಆದ ನಿಮ್ಮಗಳಿಗೆ ಕರೆ ನೀಡುವುದೇನೆಂದರೆ, ಮೇಲೆ ತಿಳಿಸಿದಂತೆ ಪೂರ್ತಿ ಬಾಕಿ ಸಾಲವನ್ನು ಈ ನೋಟೀಸ್ ದಿನಾಂಕದಿಂದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು. ವಿಫಲರಾದಲ್ಲಿ ಕೆಳಸಹಿದಾರರು ಸದರಿ ಕಾಯಿದೆಯಂತೆ ಮೇಲೆ ತಿಳಿಸಿದ ಭದ್ರತೆಗಳ ಮೇಲೆ ಪರಿಣಾಮ ಉಂಟಾಗುವ ರೀತಿ ಕ್ರಮ ಕೈಗೊಳ್ಳಲಾಗುವುದು ಅನಿವಾರ್ಯವಾಗುತ್ತದೆ. ಕಾಯಿದೆಯ ಕಲಂ 13(13) ಅನ್ನು ಗಮನಿಸಿ ಇದರಂತೆ ನೀವು ಮೇಲೆ ಉಲ್ಲೇಖಿಸಲಾದ ಭದ್ರತೆಗಳನ್ನು ಮಾರಾಟ, ಭೋಗ್ಯಾಧಾರ ಅಥವಾ ಇತರೆ ರೀತಿಯಲ್ಲಿ ನಮ್ಮ ಒಪ್ಪಿಗೆ ಇಲ್ಲದೆ ವರ್ಗಾವಣೆ ಮಾಡುವುದನ್ನು ಪ್ರತಿಬಂಧಿಸಲಾಗಿದೆ.

ಸ್ಥಳ: ಮೈಸೂರು
ದಿನಾಂಕ: 06.05.2026

ಸಹಿ/- ಅಧಿಕೃತ ಅಧಿಕಾರಿ, ನಿಡೋ ಹೋಮ್ ಫೈನಾನ್ಸ್ ಲಿಮಿಟೆಡ್ ಪರವಾಗಿ
(ಹಿಂದೆ ಎಡೆಲ್‌ವೈಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್: +91 44 4564 4022

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು **ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)** ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು **ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)** ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	161805438	ಗೃಹ ಸಾಲ	1. ಮಂಗಳಮ್ಮ ಡಿ 2. ಡಿ ನಾಗಪ್ಪ	28.03.2026	ಐಎನ್‌ಆರ್ 5,12,303.22/-

ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಖಾತಾ ಸಂ. 23, ಇ-ಖಾತಾ ಆಸ್ತಿ ಸಂ. 15800200400400039, ಅಳತೆ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 7.02 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.80 ಮೀಟರ್, ಒಟ್ಟಾರೆ ಅಳತೆ: 89.75 ಚ.ಮಿ. ಕಟ್ಟಡದ ಅಳತೆ: 89.75 ಚ.ಮೀ. ಕಮಾರಹಳ್ಳಿ ಗ್ರಾಮ, ಬೇಗೂರು ಹೋಬಳಿ, ನಿತ್ರೆ ಗ್ರಾಮ ಪಂಚಾಯಿತಿ ವ್ಯಾಪ್ತಿ, ಗುಂಡ್ಲುಪೇಟೆ ತಲ್ಲೂಕು, ಚಾಮರಾಜನಗರ ಜಿಲ್ಲೆ, ಕರ್ನಾಟಕ. **ಚಕ್ಕುಬಂದಿ:** ಪೂರ್ವಕ್ಕೆ: ಮಹೇಶ್ ರವರ ಮನೆ, ಪಶ್ಚಿಮಕ್ಕೆ: ಕುಮಾರ ರವರ ಮನೆ, ಉತ್ತರಕ್ಕೆ: ದಾರಿ, ದಕ್ಷಿಣಕ್ಕೆ: ಪುಟ್ಟಬಸಪ್ಪ ರವರ ಮನೆ.

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು **ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)**ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ **ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)** ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 06.05.2026
ಸ್ಥಳ: ಚಾಮರಾಜನಗರ, ಕರ್ನಾಟಕ

PUBLIC NOTICE

Public are hereby informed that I, **SRI. KRISHNA REDDY,** S/o. Sri. N.M. Venkataramana Reddy, has lost the original documents i.e., 1) Sale deed Dt:17-11-1961, Doc. No.346/1961-62, 2) sale deed dt: 20/05/1988, document No.328/1988-89 of Book-I and 3) sale deed dt: 15-02-2007, registered as document No.KOG-1-02034/2006-07, document stored in C.D.NO.KOGD11, in respect of land bearing Sy.No.829/A1, (Old Sy.No.829/A), measuring 12 acres 71cents, situated at Ikkadahalli Village, Palya Hobli, Kollegala Taluk, Chamarajanagara District.

I have notified the jurisdictional police about the loss of the said documents on 28/04/2026 vide Lost Report No.2177163/2026, No.2177188/2026 and No.2177209/2026.

Any person/s finding the aforesaid original Documents are requested to kindly contact the undersigned and handover the same immediately and the persons will be suitably rewarded.

SRI. KRISHNA REDDY
residing at No.2080, East End B Main Road, 38th Cross, Jayanagara 9th Block, Bengaluru-560 069. Phone:9449506366

ಸಾಲ ವಸುಲಾತಿ ನ್ಯಾಯಾಧಿಕರಣ-II
ಬೆಂಗಳೂರು
ಬಿ.ಎಸ್.ಎನ್.ಎಲ್ ಕಟ್ಟಡ, 4ನೇ ಮಹಡಿ, ಟೆಲಿ ಫೋನ್ ಮನೆ, ರಾಜಭವನ್ ರಸ್ತೆ, ಬೆಂಗಳೂರು-560001
ಒ.ಎ.ನಂ. 1353 /2023

ನಡುವೆ : ಕೆನರಾ ಬ್ಯಾಂಕ್
ನಂಜುಮಳಿಗೆ ಶಾಖೆ, ಮೈಸೂರು - 570004.
.....ಅರ್ಜಿದಾರರು
ಮತ್ತು: ಕರ್ನಾಟಕ ಬಿಸಿನೆಸ್ ಕಾರ್ಪೊರೇಷನ್
ಮತ್ತು ಇತರರು ....ಪ್ರತಿವಾದಿಗಳು

ಸಾಲ ವಸುಲಾತಿ ನ್ಯಾಯಾಧಿಕರಣ ನಿಯಮ (ಕ್ರಮ) 1993 ರ ನಿಯಮ 23 (Viii) ಅಡಿಯಲ್ಲಿ ಪ್ರತಿವಾದಿ ರವರಿಗೆ ನೀಡಿರುವ ಸಮನ್ಸ್

1. ಮೆಸ್ಸರ್ಸ್ ಕರ್ನಾಟಕ ಬಿಸಿನೆಸ್ ಕಾರ್ಪೊರೇಷನ್, ಪಾಲುದಾರರ ಸಂಸ್ಥೆ, ಕಚೇರಿ/ವ್ಯವಹಾರದ ಸ್ಥಳ: #B, 7ನೇ "A" ಕ್ರಾಸ್, ರಾಜ್‌ಕುಮಾರ್ ರಸ್ತೆ, BSNL ಕಚೇರಿ ಹತ್ತಿರ, ಶಕ್ತಿ ನಗರ, ಮೈಸೂರು - 570 029.
ಇದನ್ನು ಪ್ರತಿನಿಧಿಸುವ ಪಾಲುದಾರರು
1. ಶ್ರೀ ಮೋಹನ್ ಕುಮಾರ್.ಜಿ, ಶ್ರೀ ಜಿ.ಕೆ.ಜಯಶಿವ ಕುಮಾರ್
2. ಶ್ರೀಮತಿ ರೂಪ ಮೋಹನ್ ಕೋಂ ಮೋಹನ್ ಕುಮಾರ್. ಜಿ.
2. ಶ್ರೀ ಮೋಹನ್ ಕುಮಾರ್. ಜಿ, 47 ವರ್ಷ ವಯಸ್ಸು, ಶ್ರೀ ಜಿ.ಕೆ.ಜಯಶಿವ ಕುಮಾರ್ ಪಾಲುದಾರರು: ಮೆಸ್ಸರ್ಸ್ ಕರ್ನಾಟಕ ಬಿಸಿನೆಸ್ ಕಾರ್ಪೊರೇಷನ್, ವಾಸ: ಸಂಖ್ಯೆ 743132, 2ನೇ ಕ್ರಾಸ್, 2ನೇ ಮಹಡಿ, ಸೋಜಿ ಸ್ಟ್ರೀಟ್, ಲಷ್ಕರ್ ಮೊಹಲ್ಲಾ, ಮೈಸೂರು - 570 001.
3. ಶ್ರೀಮತಿ ರೂಪ ಮೋಹನ್, ಸುಮಾರು 45 ವರ್ಷ ವಯಸ್ಸು, ಶ್ರೀಮತಿ ಮೋಹನ್ ಕುಮಾರ್.ಜಿ. ಪಾಲುದಾರ: ಮೆಸ್ಸರ್ಸ್. ಕರ್ನಾಟಕ ವ್ಯಾಪಾರ ನಿಗಮ, ವಾಸ: ನಂ.743/32, 2ನೇ ಮಹಡಿ, 2ನೇ ಕ್ರಾಸ್, ಸೋಜಿ ಸ್ಟ್ರೀಟ್, ಲಷ್ಕರ್ ಮೊಹಲ್ಲಾ, ಮೈಸೂರು - 570 001.

ಅರ್ಜಿದಾರರು, 1993ರ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಬಾಕಿ ಸಾಲ ವಸುಲಾತಿ ಕಾಯ್ದೆಯ ಯು/ಎಸ್ 19ರ ಅಡಿಯಲ್ಲಿ **ರೂ. 1,20,69,991.79/- (ಒಂದು ಕೋಟಿ ಇಪ್ಪತ್ತು ಲಕ್ಷ ಅರವತ್ತೊಂಬತ್ತು ಸಾವಿರದ ಒಂಬತ್ತು ನೂರ ತೊಂಬತ್ತೊಂದು ಮತ್ತು ಎಪ್ಪತ್ತೊಂಬತ್ತು ಪೈಸೆ)** ಅರ್ಜಿಯಲ್ಲಿ ಹೇಳಲಾದ ಪರಿಹಾರ ಹಾಗೂ ಇತರೆ ವೆಚ್ಚಗಳು ಬಾಕಿ ವಸೂಲಾತಿಗಾಗಿ ಅರ್ಜಿ ಸಲ್ಲಿಸಲಾಗಿದೆ.

ನೀವು ಈ ನೋಟಿಸು ಪ್ರಕಟವಾದ ದಿನದಿಂದ 30 ದಿನಗಳ ಮುಂಚಿತವಾಗಿ ಅಥವಾ **ದಿನಾಂಕ 04-06-2026 ರಂದು 10.30ಕ್ಕೆ** ನೀವಾಗಲಿ ಅಥವಾ ನಿಮ್ಮ ವಕೀಲರ ಜೊತೆಗೆ ನ್ಯಾಯಾಧಿಕರಣದ ಎದುರು ಹಾಜರಿಯೊಂದಿಗೆ ಲಿಖಿತ ಹೇಳಿಕೆ ಮತ್ತು ಕಾರಣವನ್ನು ನೀಡಬೇಕಾಗಿ ಈ ಮೂಲಕ ತಿಳಿಸುತ್ತೇವೆ, ಮೇಲ್ಕಂಡ ದಿನಾಂಕದಂದು ಹಾಜರಾಗಲು ವಿಫಲವಾದಲ್ಲಿ ಸದರಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ಆಲಿಸಿ ನಿರ್ಧಾರವನ್ನು ತೀರ್ಮಾನಿಸಲಾಗುವುದು,

ದಿನಾಂಕ: **24-03-2026** ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ರಿಜಿಸ್ಟ್ರಾರ್,
ಸಾಲ ವಸುಲಾತಿ ನ್ಯಾಯಾಧಿಕರಣ- II ಬೆಂಗಳೂರು





ಸುದ್ದಿ ಸಿಂಚನ

ಸಿ.ಚಂದನಗೌಡರಿಗೆ ನೇಗಿಲಯೋಗಿ ಗೌರವ

ಮೈಸೂರು: ನೆಲ, ಜಲ ಹಾಗೂ ಅನ್ನದಾತರ ಪರವಾಗಿ ಹಗಲಿರುಳು ಶ್ರಮಿಸುತ್ತಿರುವ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ. ಚಂದನ್‌ಗೌಡ ಅವರಿಗೆ



ಕರ್ನಾಟಕ ನೇತಾಜಿ ಚಾರಿಟಬಲ್ ಟ್ರಸ್ಟ್ 'ನೇಗಿಲ ಯೋಗಿ' ಪ್ರಶಸ್ತಿಗೆ ಚಂದನ್ ಗೌಡ ನೀಡಲಿದೆ. ಮೇ 7ರಂದು ಬೆಂಗಳೂರಿನ ಜೆ.ಸಿ.ರಸ್ತೆಯ ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ಜರುಗಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ನಾಡಿನ ಹೆಸರಾಂತ ಸ್ವಾಮೀಜಿಗಳು ಹಾಗೂ ಸಾಹಿತಿಗಳು ಮತ್ತು ವಿವಿಧ ಕ್ಷೇತ್ರಗಳ ಗಣ್ಯರುಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಟ್ರಸ್ಟ್‌ನ ಸಂಸ್ಥಾಪ ಅಧ್ಯಕ್ಷ ರವಿಕುಮಾರ್‌ಹಾಗೂ ಗೌರವಾಧ್ಯಕ್ಷ ಎಂ.ಪುಟ್ಟೇಗೌಡ ಅವರು ತಿಳಿಸಿದ್ದಾರೆ.

ರೈತರಿಗೆ ಹವಾಮಾನ ಇಲಾಖೆಯಿಂದ ಸಲಹೆ

ಮೈಸೂರು: ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಜಿಲ್ಲೆಯಲ್ಲಿ ಮೇ 6 ರಿಂದ 10 ರವರೆಗೆ ತುಂತುರುವಿನಿಂದ ಸಾಧಾರಣ ಮಳೆ ಬರುವ ಸಾಧ್ಯತೆ ಇದೆ. ಅಲ್ಲದೆ ಗರಿಷ್ಠ ಉಷ್ಣಾಂಶ 34 ರಿಂದ 35 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ. ರೈತರು ಬಾಳೆ, ಎಲೆಕೋಸು, ಹೂ ಕೋಸು, ಕಬ್ಬು, ತರಕಾರಿ ಬೆಳೆಗಳು, ಟೊಮೆಟೋ, ತೆಂಗಿನಕಾಯಿ, ಅಡಿಕೆ, ಹೆಸರು, ಅಲಸಂದೆ ಮತ್ತು ಉದ್ದು ಮುಂತಾದ ಬೆಳೆಗಳಿಗೆ ಕೀಟಬಾಧೆ ಕಾಡಲಿದೆ. ರೈತರು ಅಗತ್ಯ ಔಷಧೋಪಚಾರ ಮಾಡಬೇಕು. ರೈತರು ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕ ಡಾ.ಎನ್. ಉಮಾಶಂಕರ್‌ಕುಮಾರ್ ಮತ್ತು ತಾಂತ್ರಿಕ ಅಧಿಕಾರಿ ಡಾ.ಜಿ.ವಿ.ಸುಮಂತ್ ಕುಮಾರ್ ಅವರ ದೂ. 0821 - 2591267, ಮೊ.95353 45814 ಸಂಪರ್ಕಿಸಬಹುದು.

ಎಸ್.ಗುರುಸ್ವಾಮಿ ನೇಮಕ

ಮೈಸೂರು: ಈವರೆಗೆ ಮೈಸೂರು ವಿಭಾಗದ



ಅಧ್ಯಕ್ಷರಾಗಿದ್ದ ಎಸ್. ಗುರುಸ್ವಾಮಿ ಅವರನ್ನು 2026-27ನೇ ಸಾಲಿಗೆ ಕರ್ನಾಟಕ ಎನ್‌ಎಸಿಐಸಿಐ ರಾಜ್ಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ವಿದ್ಯಾರ್ಥಿಗಳ ಸಂಘದ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ಮೈಸೂರು: ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಎಸ್. ಸುಬ್ಬಣ್ಣನವರ ಸಾರ್ವಜನಿಕ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಂಘದ ವಿದ್ಯಾಸಂಸ್ಥೆಯ ಶಾಲೆಗಳಲ್ಲಿ, ವಿದ್ಯಾರ್ಥಿನಿಲಯದಲ್ಲಿ ವ್ಯಾಸಂಗ ಮಾಡಿದ ಹಿರಿಯ ವಿದ್ಯಾರ್ಥಿಗಳು ಸಂಘದ ಸದಸ್ಯತ್ವ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ವಿದ್ಯಾರಣ್ಯಪುರಂನಲ್ಲಿರುವ ಸಂಘದ ಕಚೇರಿಯಲ್ಲಿ ಸದಸ್ಯತ್ವದ ಅರ್ಜಿ ಪಡೆದು ನಿಗದಿತ ಶುಲ್ಕ ಪಾವತಿಸಿ ಸದಸ್ಯರಾಗಲು ಕೋರಿದೆ. ಮೊ. 9449508757; 9538501100; 9972593760 ಸಂಪರ್ಕಿಸಬಹುದು.

₹37.35 ಲಕ್ಷ ವಂಚನೆ

ಮೈಸೂರು: ವಿದೇಶದ ಉದ್ಯೋಗ ಆಮಿಷವೊಡ್ಡಿ ವ್ಯಕ್ತಿಯೊಬ್ಬರಿಗೆ 37.35 ಲಕ್ಷ ರೂ. ಪಡೆದು ವಂಚಿಸಿರುವ ಘಟನೆ ಲಷ್ಕರ್ ಮೊಹಲ್ಲಾದಲ್ಲಿ ನಡೆದಿದೆ. ಲಷ್ಕರ್ ಮೊಹಲ್ಲಾ ನಿವಾಸಿ ಮಹಮ್ಮದ್‌ಯಾಹಿಯಾ ಹಣ ಕಳೆದುಕೊಂಡವರು. ಯುಕೆಯ ಹೋಟೆಲ್ ನಲ್ಲಿ ಶೆಫ್ ಕೆಲಸ ಖಾಲಿ ಇರುವ ಬಗ್ಗೆ ಇನ್‌ಸ್ಟಾದಲ್ಲಿ ಜಾಹೀರಾತು ಗಮನಿಸಿದ ಮಹಮ್ಮದ್ ಯಾಹಿಯಾ ಅವರು, ಜಾಹೀರಾತಿನಲ್ಲಿನ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಿದ್ದಾರೆ. ಈ ವೇಳೆ ಕರೆ ಸ್ವೀಕರಿಸಿದ ವಂಚಕರು, ಉದ್ಯೋಗ ಕೊಡಿಸುವ ಭರವಸೆ ನೀಡಿ ಹಂತ ಹಂತವಾಗಿ 37.35 ಲಕ್ಷ ರೂ. ಹಣವನ್ನು ಪಡೆದಿದ್ದು, ಮತ್ತೇ ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾರೆ. ಇದರಿಂದ ತಾವು ವಂಚನೆಗೊಳಗಾಗಿರುವುದು ಗೊತ್ತಾಗಿದೆ. ಈ ಸಂಬಂಧ ಹಣ ಕಳೆದುಕೊಂಡ ಮಹಮ್ಮದ್ ಯಾಹಿಯಾ ಅವರು ದೂರು ನೀಡಿದ್ದು, ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹದೇವಸ್ವಾಮಿ ನೇಮಕ



ಹಲ್ಲಹಳ್ಳಿ: ಬಿಜೆಪಿಯ ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷರಾಗಿ ಎಂ.ಜಿ.ಮಹದೇವಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

ಬಸವಣ್ಣನವರ ವಿಚಾರ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದೇವೆ: ವಿ.ಸೋಮಣ್ಣ

ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರ ಪ್ರಶ್ನೆ

• **ಕನ್ನಡಪ್ರಭ ವಾರ್ತೆ** ಮೈಸೂರು



ಬಸವಣ್ಣನವರ ವಿಚಾರಗಳನ್ನು ನಾವು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದೇವೆ ಎಂಬ ಸಂಶಯ ಕಾಡುತ್ತಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ನಗರದ ಸರ್ಕಾರಿ ಅತಿಥಿಗೃಹದ ಸಭಾಂಗಣದಲ್ಲಿ ಮೈಸೂರು ಬಸವ ಬಳಗಗಳ ಒಕ್ಕೂಟ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಚಿತ್ರ ಕಲಾವಿದ ಎಲ್. ಶಿವಲಿಂಗಪ್ಪ ಅವರು ರಚಿಸಿರುವ ಮಹಾ ಮಾನನವತಾವಾದಿ ಬಸವಣ್ಣ, ವೀರ ವೈರಾಗ್ಯ ನಿಧಿ ಅಲ್ಲಮ ಪ್ರಭು ಕೃತಿಗಳ ಹಿಂದಿ ಹಾಗೂ ಮರಾಠಿ ಅನುವಾದ ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಒಂಬೈನೂರ ವರುಷಗಳ ಹಿಂದಯೇ ಬಸವಣ್ಣನವರು ಎಲ್ಲರಿಗೂ ಕೂಡ ಸಮಾನತೆ ಕೊಡಬೇಕು, ಸಮಾನತೆಯ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಸಮಾನತೆ ಇಲ್ಲದೆ ಯಾರು ಕೂಡ ಬದುಕುವುದಕ್ಕೆ ಸಾಧ್ಯವೇ ಇಲ್ಲ. ಪ್ರತಿಯೊಬ್ಬರು ಕೂಡ ಕಾಯಕ ಮಾಡಿ ತನ್ನ ಬದುಕನ್ನು ರೂಪಿಸಿಕೊಳ್ಳಬೇಕು ಸೇರಿದಂತೆ ಇನ್ನೂ ಅನೇಕ ವಿಚಾರಗಳನ್ನು ಅನುಷ್ಠಾನಕ್ಕೆ ತಂದಿದ್ದರು ಎಂದು ನಾವು ಮಾತಾನಾಡುತ್ತಾ ಇರುತ್ತೇವೆ. ಆದರೆ ಅದನ್ನು ಎಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದೇವೆ ಎನ್ನುವ ಸಂಶಯ ನಮ್ಮನ್ನು ಕೂಡ ಕಾಡುತ್ತಾ ಇದೆ. ಆದ್ದರಿಂದ ನಾವು ಏನನ್ನು ಮಾತನಾಡುತ್ತೇವೆ ಅದನ್ನು ನಾವೆಲ್ಲ ನಮ್ಮ ನಡುವಳಿಕೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಬದಲಾವಣೆ ಆಗಬೇಕು ಎಂದರು.

- ಹಿರಿಯ ಚಿತ್ರ ಕಲಾವಿದ ಎಲ್. ಶಿವಲಿಂಗಪ್ಪ ರಚಿಸಿರುವ ಮಹಾ ಮಾನನವತಾವಾದಿ ಬಸವಣ್ಣ, ವೀರ ವೈರಾಗ್ಯ ನಿಧಿ ಅಲ್ಲಮ ಪ್ರಭು ಕೃತಿಗಳ ಹಿಂದಿ ಹಾಗೂ ಮರಾಠಿ ಅನುವಾದ ಕೃತಿ ಲೋಕಾರ್ಪಣೆ
- ನಾವು ಏನನ್ನು ಮಾತನಾಡುತ್ತೇವೆ ಅದನ್ನು ನಡುವಳಿಕೆಯಲ್ಲಿ ಅಳವಡಿಸಿಕೊಳ್ಳಬೇಕು

ಬಸವಣ್ಣವರ ಅನೇಕ ವಿಚಾರಧಾರೆಗಳು, ಅವರ ದೂರದೃಷ್ಟಿಯ ಚಿಂತನೆ ರಾಷ್ಟ್ರ, ರಾಜ್ಯ ನಿರ್ಮಾಣದಲ್ಲಿ ಬಳಸಿಕೊಳ್ಳುವುದು ನಮ್ಮ ಕರ್ತವ್ಯ. ಈ ದೇಶದ ಕೋಟ್ಯಂತರ ಜನ ಬಸವಣ್ಣನವರ ಬದುಕನ್ನು, ಸಂದೇಶವನ್ನು ಮೈಗೊತ್ತಿಕೊಂಡು ಭಗವಂತನ ಸ್ವರೂಪದಲ್ಲಿ ನೋಡುತ್ತಾ, ಅವರ ಆಚಾರ-ವಿಚಾರ ಅನುಸರಿಸುತ್ತಾ ಇದ್ದಾರೆ ಎಂದರು.

ಮಹಾ ಮಾನವತಾವಾದಿ ಬಸವಣ್ಣನವರವಿಚಾರಧಾರೆಗಳನ್ನುಮಾತಾನಾಡುವ ನಾವು ಅವುಗಳನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದೇವೆ ಎನ್ನುವುದು ಒಂದು ದೊಡ್ಡ ಪ್ರಶ್ನೆ. ಬೇವಿನ ಬೀಜ ಬಿತ್ತಿ, ಬೆಲ್ಲದ ಕಟ್ಟೆ ಕಟ್ಟಿ, ಆಕಳ ಹಾಲನ್ನು ಎರೆದು, ಜೇನುತುಪ್ಪವ ಹಾಕಿದರೂ ಅದು ಕಹಿಯಾಗದೇ ಸಿಹಿಯಾಗುತ್ತದಯೇ ಎನ್ನುವ ವಚನಗಳು ಸೇರಿದಂತೆ ಹಲವಾರು ವಚನಗಳನ್ನು ನಾವು ಹೇಳುತ್ತೇವೆ. ಆದರೆ ನಮ್ಮ ನಡವಳಿಕೆ ಯಾವ ರೀತಿ ಇದೆ. ಎಷ್ಟು ಜನರಿಗೆ ಕಾಯಕ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇವೆ ಎಂದು ಅವರು ಪ್ರಶ್ನಿಸಿದರು.

ಸಾಮಾನ್ಯರನ್ನು ಎಷ್ಟು ಮಟ್ಟಿಗೆ ನಾವು ನೋಡುತ್ತೇವೆ? ನಮ್ಮವರೇ ಆಗಿದ್ದರೂ ಕೂಡ ಅವರು ಬಡತನದಲ್ಲಿ ಇದರೆ ಸಮಾನತೆಯಿಂದ ನಾವು ಕಾಣುವುದಿಲ್ಲ. ಬಸವಣ್ಣನವರು ಹೇಳಿರುವ ವಿಚಾರಗಳನ್ನು ಎಲ್ಲರಿಗೂ ಹೇಳುತ್ತೇವೆ. ನಾವೇ ಸ್ವತಃ ತಪ್ಪು ಮಾಡುತ್ತಾ ಇರುತ್ತೇವೆ. ಇದು ಒಂದು ರೀತಿ ಚರ್ಚೆ ವಿಷಯ ಆಗಿದೆ ಎಂದರು.

ಕಲಾವಿದ ಶಿವಲಿಂಗಪ್ಪನವರು ನಿಜ ಜೀವನದಲ್ಲಿ ಬಸವಣ್ಣ ಎಂದರೆ ಏನು?, ಅವರ ಕಾಯಕ ಏನು, ಅವರ ತೀರ್ಮಾನಗಳು ಯಾವುದು, ಈ ರೀತಿ ನಡೆದುಕೊಳ್ಳುವುದಕ್ಕೆ ಬರೆದಿರುವಂತಹ ಸಂದೇಶ, ತಿಳುವಳಿಕೆಯೂ ನಿಜವಾಗಲೂ ಶ್ಲಾಘನೀಯವಾಗಿದೆ. ಈ ಕೃತಿಯನ್ನು ಎಷ್ಟು ಮಂದಿ ಓದುತ್ತಾರೆ ಎನ್ನುವುದಕ್ಕಿಂತ, ಅದನ್ನು ಓದಿ ಅರ್ಥೈಸಿಕೊಂಡು ಹತ್ತು ಜನರ ಶರಣರ ದಾದಿಯಲ್ಲಿ ನಡೆದರೇ ಅದಕ್ಕಿಂತ ದೊಡ್ಡ ಕೆಲಸ ಮತ್ತೊಂದಿಲ್ಲ ಎಂದರು.

ಬಸವಣ್ಣನವರು ಹೆಣ್ಣು ಮಕ್ಕಳಿಗೆ ಆದ್ಯತೆ ಕೊಡಬೇಕು. ಅವರು ಕೂಡ ಮುಖ್ಯವಾಹಿನಿಗೆ ಬರಬೇಕು ಎಂದು ಆದ್ಯತೆ ಕೊಟ್ಟರು. ಅದೇ ರೀತಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸುಮಾರು ವರ್ಷಗಳಿಂದ ಜಾರಿಯಾಗದೇ ಇದ್ದ ಮಹಿಳಾ ಮೀಸಲಾತಿ ವಿಧೇಯಕವನ್ನು ಜಾರಿಗೆ ತರಲು ಪ್ರಯತ್ನಿಸಿದರು. ಪ್ರತಿಪಕ್ಷಗಳು ವಿಧೇಯಕವನ್ನು ಸೋಲಿಸಿದವು. ಆದರೆ ಪಂಚರಾಜ್ಯಗಳ ಚುನಾವಣೆಯಲ್ಲಿ ಮಹಿಳೆಯರು ನಮ್ಮ ಶಕ್ತಿ ಏನು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ವಿಧೇಯಕ ವಿರೋಧಿಸಿದವರಿಗೆ ಸೋಲನ್ನು ಉಣಿಸಿದ್ದಾರೆ ಎಂದರು. ಹಿರಿಯ ಲೇಖಕ ಡಾ. ಪ್ರಧಾನ ಗುರುದತ್ತ, ಕೃತಿಕಾರ ಎಲ್. ಶಿವಲಿಂಗಪ್ಪ, ಬಸವ ಬಳಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಜಮುನಾರಾಣಿ ಮಿರ್ಲೆ ಕೇಬಲ್ ಮಹೇಶ್, ಆಲನಹಳ್ಳಿ ಮಹದೇವಸ್ವಾಮಿ, ಸ್ವಾಮಿ ಮೊದಲಾದವರು ಇದ್ದರು.

ಜನರು ಸ್ಮರಿಸುವಂತಹ ಕೆಲಸ ಮಾಡಬೇಕು: ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಬೆಟ್ಟದಪುರ



ಸರ್ಕಾರಿ ನೌಕರರ ಸೇವಾವಧಿಯಲ್ಲಿ ಜನಪ್ರತಿನಿಧಿಗಳು ಜನರ ವಿಶ್ವಾಸ ಗಳಿಸಿಕೊಂಡು ಜನರು ಸ್ಮರಿಸುವಂತಹ ಒಳ್ಳೆಯ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದು ಬೆಟ್ಟದಪುರ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ತಿಳಿಸಿದರು.

ಅತ್ತಿಗೋಡು ಗ್ರಾಪಂ ಕಚೇರಿಯಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಕಳೆದ 38 ವರ್ಷಗಳಿಂದ ಕರ ವಸೂಲಿಗಾರರಾಗಿ ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಮೇಲೂರು ಗ್ರಾಮದ ಎಂ.ಎ. ಶಿವಣ್ಣ ಹಾಗೂ ಪತ್ನಿ ಜಯಮ್ಮ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

2008ರಲ್ಲಿ ಅತ್ತಿಗೂಡು ಗ್ರಾಪಂಯಲ್ಲಿ ನಾನು ಕಾರ್ಯದರ್ಶಿಯಾಗಿ ಕರ್ತವ್ಯಕ್ಕೆ ಹಾಜರಾದಾಗ ಶಿವಣ್ಣ ಅವರು ನಮಗೂ ಕೂಡ ಮಾರ್ಗದರ್ಶಕರಾಗಿಯು ಸೇವೆ ಸಲ್ಲಿಸುತ್ತಿದ್ದರು. ಸೌಮ್ಯ ಸ್ವಭಾವದರು. ಸಾರ್ವಜನಿಕರಿಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದರು ಎಂದರು.

ಎಂ.ಎ.ಶಿವಣ್ಣ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಮೊದಲು ಕಿತ್ತೂರು ಮಂಡಲ ಪಂಚಾಯಿತಿಯಲ್ಲಿ ಆರು ವರ್ಷ ಸೇವೆ ಸಲ್ಲಿಸಿ 32 ವರ್ಷಗಳ ಕಾಲ ಅತ್ತಿಗೋಡು ಗ್ರಾಪಂಯಲ್ಲಿ ಕರ ವಸೂಲಿಗಾರರಾಗಿ ಸರ್ಕಾರಿ ಸೇವೆ ಸಲ್ಲಿಸಿದ್ದೇನೆ. ಒಟ್ಟು 38 ವರ್ಷಗಳ ಕಾಲ ಸರ್ಕಾರಿ ಸೇವೆ ಸಲ್ಲಿಸಿದ್ದೇನೆ. ಗ್ರಾಮಗಳಿಗೆ ಹೋದಾಗ ಸಾರ್ವಜನಿಕರು ಕೂಡ ವಿಶ್ವಾಸದಿಂದ ಸ್ಪಂದಿಸುತ್ತಿದ್ದರು ಎಂದರು.

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ವಿಶ್ವನಾಥ್ ಮಾತನಾಡಿದರು.

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ್, ಕಾರ್ಯದರ್ಶಿ ಪಾಂಡು, ದ್ವಿತೀಯ ದರ್ಜೆ ಲೆಕ್ಕ ಸಹಾಯಕಿ ನೇತ್ರ, ಗ್ರಾಪಂ ಮಾಜಿ ಅಧ್ಯಕ್ಷ ಗಂಗಾಧರ್, ರಾಜೇಗೌಡ, ಮಾಜಿ ಸದಸ್ಯರಾದ ಮುರಳಿಧರ, ಶೇಖರ್, ರುದ್ರೇಶ್, ಪ್ರೀತಿ ಮಲ್ಲಿಕಾರ್ಜುನ್, ಲಕ್ಷ್ಮಿ, ನಿವೃತ್ತ ಬಿಸಿಎಂ ಇಲಾಖೆಯ ನೌಕರ ರಾಮಸ್ವಾಮಿ, ಮಾಜಿ ಸೈನಿಕ ಪಿ. ಪ್ರತಾಪ್, ಮುಖಂಡರಾದ ಶೀರಾಳಶೆಟ್ಟಿ, ಕೆ. ಮಹದೇವ ಶೆಟ್ಟಿ, ರಾಜೇಶ್, ದಿವ್ಯ ಸ್ಪಂದನ, ಎ.ಟಿ. ಸುರೇಂದ್ರ, ಪ್ರಕಾಶ್, ಎಸ್ .ಪಿ .ನಟೇಶ್, ಪಂಚಾಯಿತಿ ಸಿಬ್ಬಂದಿ ಸೇರಿದಂತೆ ಇತರರು ಇದ್ದರು.

ತಹಸೀಲ್ದಾರ್ ವರ್ಗಾವಣೆಗೆ ರೈತರ ಒತ್ತಾಯ

ರೈತರ ಸಮಸ್ಯೆ ಬಗೆಹರಿಸುವಲ್ಲಿ ತಾಲೂಕು ಆಡಳಿತ ಸಂಪೂರ್ಣ ವಿಫಲ: ಜಿಲ್ಲಾಧ್ಯಕ್ಷ ಸತೀಶ್

• **ಕನ್ನಡಪ್ರಭ ವಾರ್ತೆ** ಟಿ.ನರಸೀಪುರ



ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಾಲೂಕು ಆಡಳಿತ ಸಂಪೂರ್ಣವಾಗಿ ವಿಫಲವಾಗಿದ್ದು, ರೈತರ ಬಗ್ಗೆ ನಿರ್ಲಕ್ಷ್ಯ ವಹಿಸಿ ಅಧಿಕಾರಿಗಳನ್ನು ತಹ ಬದಿಗೆ ತರದೇ ಮೆದು ಧೋರಣೆ ತೋರಿರುವ ತಹಸೀಲ್ದಾರ್‌ಸುರೇಶಾಚಾರ್‌ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ-ಹಸಿರುಸೇನೆ ಸಂಘಟನೆಯ ಜಿಲ್ಲಾಧ್ಯಕ್ಷ ಸತೀಶ್ ಒತ್ತಾಯಿಸಿದ್ದಾರೆ.

ಪಟ್ಟಣದ ಕರ್ನಾಟಕ ರಾಜ್ಯ ರೈತ ಸಂಘ-ಹಸಿರುಸೇನೆ ಸಂಘದ ಕಚೇರಿಯಲ್ಲಿ ಮಂಗಳವಾರ ನಡೆದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದರು.

ನಮ್ಮ ಸಂಘಟನೆಯು ತಾಲೂಕಿನ 5 ಹೋಬಳಿಗಳ ರೈತ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಅಧ್ಯಯನಮಾಡಿ ಮಾಹಿತಿ ಕಲೆ ಹಾಕಿದೆ. ತಾಲೂಕು ಆಡಳಿತವಾಗಲಿ, ಜಿಲ್ಲಾಡಳಿತವಾಗಲಿ ರೈತರಸಮಸ್ಯೆಗಳನ್ನು ಬಗೆಹರಿಸಲು ಸಂಪೂರ್ಣವಾಗಿ ವಿಫಲವಾಗಿರುವುದು ಗಮನಕ್ಕೆ ಬಂದಿದೆ. ತಾಲೂಕು ಆಡಳಿತ ರೈತರ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ಪ್ರಯತ್ನ ಮಾಡಿಲ್ಲ, ತಹಸೀಲ್ದಾರ್‌ಅವರ ಕೈ ಕೆಳಗೆ ಕೆಲಸ ಮಾಡುವ ಅಧಿಕಾರಿಗಳು ರೈತರನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ನಿರ್ಲಕ್ಷ್ಯ ಭಾವನೆ ತೋರುತ್ತಿದ್ದಾರೆ ಎಂದು ದೂರಿದರು.

ಭೂ ಸರ್ವೆ ಕಾರ್ಯದಲ್ಲಿ ವಿಳಂಬ, ಅಳತೆಗಳಲ್ಲಿ ತಪ್ಪುಗಳು, ದಾಖಲೆಗಳ ಸರಿಯಾದ ನವೀಕರಣವಾಗದಿರುವುದು ಸೇರಿದಂತೆ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಇದರಿಂದ ರೈತರು ಮತ್ತು ಜಮೀನು ಮಾಲೀಕರು ಅನಾವಶ್ಯಕ ತೊಂದರೆ ಅನುಭವಿಸುತ್ತಿದ್ದಾರೆ. ಸರ್ವೆ ಸಮಯಕ್ಕೆ ಆಗದೇ ಇರುವುದರಿಂದ ಜಮೀನು ಗಡಿಭಾಗದ ವಿವಾದಗಳು ಹೆಚ್ಚಾಗುತ್ತಿವೆ. ಕೆಲವು ಅಧಿಕಾರಿಗಳ ನಿರ್ಲಕ್ಷ್ಯದಿಂದ ತಪ್ಪು ದಾಖಲೆಗಳು ಸೃಷ್ಟಿಯಾಗುತ್ತಿವೆ,

ಇನ್ನೂ ಕೆಲವು ಜನರು, ಅರ್ಜಿಗಳನ್ನು ಸಲ್ಲಿಸಿದ ಬಳಿಕ ತಿಂಗಳಗಟ್ಟಲೆ ಕಾಯಬೇಕಾಗುತ್ತಿದೆ. ಕೆಲವು ಕಡೆ ಮಧ್ಯವರ್ತಿಗಳ ಹಸ್ತಕ್ಷೇಪದಿಂದ ಪಾರದರ್ಶಕತೆ ಕುಂದುತ್ತಿದೆ ಎಂಬ ಆರೋಪವೂ ಕೇಳಿಬರುತ್ತಿದೆ ಎಂದು ಅವರು ಆರೋಪಿಸಿದರು.

ತಾಲೂಕಿನ ಸಾರ್ವಜನಿಕ ಹಾಗೂ ರೈತರ ಸಮಸ್ಯೆಗಳನ್ನು ತಕ್ಷಣ ಪರಿಹರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತಾಲೂಕು ಕಚೇರಿ ಮುಂದೆ ಪ್ರತಿಭಟನೆ, ರಸ್ತೆ ತಡೆ ಸೇರಿದಂತೆ ವಿವಿಧ ರೀತಿಯ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಗೌರವಾಧ್ಯಕ್ಷ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ಮಹದೇವ, ತಾಲೂಕು ಗೌರವಾಧ್ಯಕ್ಷ ಮಹದೇವಸ್ವಾಮಿ, ಮಹಿಳಾ ಅಧ್ಯಕ್ಷೆ ಶ್ವೇತಾ, ನಂಜನಗೂಡು ಘಟಕದ ಉಪಾಧ್ಯಕ್ಷ ಮಹದೇವನಾಯಕ, ತಾಲೂಕು ಪ್ರಧಾನಕಾರ್ಯದರ್ಶಿ ಶಿವನಂಜು, ಟೌನ್ ಅಧ್ಯಕ್ಷ ಶಾಂತರಾಜು, ತಾಲೂಕು ಉಪಾಧ್ಯಕ್ಷ ಸೋಮಣ್ಣ, ಕಸಬಾ ಹೋಬಳಿ ಅಧ್ಯಕ್ಷ ಪ್ರಕಾಶ್, ಮೂಗೂರು ಹೋಬಳಿ ಅಧ್ಯಕ್ಷ ಶಾಂತರಾಜು, ಸೋಸಲೆ ಹೋಬಳಿ ಅಧ್ಯಕ್ಷ ಮಹೇಶ್, ಬನ್ನೂರು ಹೋಬಳಿ ಅಧ್ಯಕ್ಷ ಜಗದೀಶ್, ತಲಕಾಡು ಹೋಬಳಿ ಅಧ್ಯಕ್ಷ ಚೆಲುವರಾಜು, ತಾಲೂಕು ಸಹ ಕಾರ್ಯದರ್ಶಿ ರಾಜೇಂದ್ರ, ರಾಮಸ್ವಾಮಿ, ಶಂಕರೇಗೌಡ, ಲೋಕೇಶ್, ಸಿದ್ದರಾಜು ಇದ್ದರು.

ಬನ್ನಿ ಭಾಗವಹಿಸಿ... ವಿಜೇತರಾದ ಪುರುಷ– ಮಹಿಳೆಯಗೆ ಫೌಂಡೇಶನ್‌ನ ಚಿಹ್ನೆ ಹೊಂದಿರುವ ಅಪ್ಪಟ ಬೆಳ್ಳಿ ಟ್ರೋಫಿ ವಿತರಣೆ: ಡಾ.ಪಿ.ಎನ್.ಗಣೇಶ್‌ಕುಮಾರ್

10ಕ್ಕೆ ಮುಕ್ತ ಯೋಗಾಸನ ಸ್ಪರ್ಧೆ; ಯೋಗ ಸಾಧಕರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಮೈಸೂರು



ನಗರದ ಶ್ರೀಕಾಂತ ವಿದ್ಯಾಸಂಸ್ಥೆಯಲ್ಲಿ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಯೋಗ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಮೇ 10ರಂದು ಆಯೋಜಿಸಲಾಗಿದೆ ಎಂದು ಯೋಗಾಚಾರ್ಯ ಡಾ.ಪಿ.ಎನ್. ಗಣೇಶ್‌ಕುಮಾರ್‌ಹೇಳಿದರು.

ಈ ಸ್ಪರ್ಧೆಯ ಅಂತಿಮ ಸುತ್ತಾದ ಚಾಂಪಿಯನ್ ಆಫ್ ಚಾಂಪಿಯನ್‌ನಲ್ಲಿ ವಿಜೇತರಾದ ಪುರುಷ ಹಾಗೂ ಮಹಿಳೆಗೆ ಫೌಂಡೇಶನ್ ನ ಚಿಹ್ನೆ ಹೊಂದಿರುವ ಅಪ್ಪಟ ಬೆಳ್ಳಿ ಟ್ರೋಫಿಯನ್ನು ವಿತರಿಸಿ, ಗೌರವಿಸಲಾಗುತ್ತದೆ. ಇ ಫೌಂಡೇಶನ್ ಸಂಸ್ಥಾಪಕ ಸುಣ್ಣದಕೇರಿ ಮಹೇಶ್ ಯೋಗ ಅವರು ಹಲವಾರು ಅರ್ಥಪೂರ್ಣವಾದ ಕಾರ್ಯಕ್ರಮ ನಡೆಸಿಕೊಡುವು ದಾಗಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾನು ಈ ಫೌಂಡೇಶನ್ ಅಧ್ಯಕ್ಷನಾದ ಬಳಿಕ ಆಯೋಜಿಸಲಾಗಿರುವ ರಾಜ್ಯ ಮಟ್ಟದ ಕಾರ್ಯಕ್ರಮವಿದು. ಇದರ ಯಶಸ್ವಿಗಾಗಿ ಕಳೆದ ಎರಡು ತಿಂಗಳಿಂದಲೂ ಬಹಳಷ್ಟು ಸಿದ್ಧತಾ ಕಾರ್ಯ ಮಾಡಿಕೊಂಡು ಬರಲಾಗಿದೆ. ನಾವು ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ ಆಯೋಜಿಸುವುದಾಗಿ ಪ್ರಕಟಿಸಿ, ರಾಜ್ಯಾದ್ಯಾಂತ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ನಡೆಸಿದಾಗ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಲವು ಜಿಲ್ಲೆಗಳಿಂದ ಯೋಗ ಶಿಕ್ಷಕರು ಸ್ಪರ್ಧಿಗಳೊಂದಿಗೆ ಸ್ಪರ್ಧೆಗೆ ಬರುವುದಾಗಿ ತಿಳಿಸಿದ್ದಾರೆ ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಸುವರ್ಣ ಬೆಳಕು ಸೇವಾ ರತ್ನ ಹಾಗೂ ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿ, ತಮ್ಮ ಅಮೂಲ್ಯ ಕೊಡುಗೆ ನೀಡಿರುವ ಯೋಗ ಸಾಧಕರಿಗೆ ಸುವರ್ಣ ಬೆಳಕು ಯೋಗ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ವಿವಿ ಕ್ರಿಯೇಷನ್ ನ ಮುಖ್ಯಸ್ಥೆ ವಿಮಲ ವೀರೇಶ್ ಚಾಲನೆ ನೀಡುವರು. ಮೇಲುಕೋಟೆ ವಂಗೀಪುರ ಮಠದ ಇಳೈ ಆಳ್ವಾರ್ ಶ್ರೀ ಸಾನ್ನಿಧ್ಯ ವಹಿಸುವರು.

ವಕೀಲ ಹಾಗೂ ಸಮಾಜ ಸೇವಕ ಮೋಹನ್ ಅಧ್ಯಕ್ಷತೆ ವಹಿಸುವರು. ಸಂಜೆ 5 ಗಂಟೆಗೆ ನಡೆಯುವ ಸಮಾರೋಪ ಸಮಾರಂಭವನ್ನು ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದು, ಸ್ಪರ್ಧೆಯ ವಿವಿಧ ವಿಭಾಗಗಳಲ್ಲಿ ಪ್ರಥಮ, ದ್ವಿತಿಯ, ತೃತೀಯ ಸ್ಥಾನಗಳಲ್ಲಿ ವಿಜೇತರಾದವರಿಗೆ ಶಾಸಕ ಟಿ.ಎಸ್. ಶ್ರೀವತ್ಸ ಟ್ರೋಫಿ ವಿತರಿಸುವರು. ಮೈಸೂರು ಯೋಗ ದಸರಾದ ಮಾಜಿ ಅಧ್ಯಕ್ಷ ದೇವರಾಜು ಮಾತನಾಡಿ, ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಯು ಒಟ್ಟು 9 ವಿಭಾಗಗಳಲ್ಲಿ ನಡೆಯಲಿದೆ. ವಯೋಮಿತಿಯು 10 ವರ್ಷದೊಳಗಿನ ಬಾಲಕರು, ಬಾಲಕಿಯರು, 11 ರಿಂದ 14 ವರ್ಷದ ಬಾಲಕರು, ಬಾಲಕಿಯರು, 15 ರಿಂದ 18 ವರ್ಷದ ಬಾಲಕ, ಬಾಲಕಿಯರು, 19 ರಿಂದ 25 ವರ್ಷದ ಯುವಕರು, ಯುವತಿಯರು, 26 ರಿಂದ 35 ವರ್ಷ, 35 ರಿಂದ 45 ವರ್ಷ, 45 ವರ್ಷ ಮೇಲ್ಪಟ್ಟ ಪುರುಷ, ಮಹಿಳೆಯರು, ಹಿರಿಯ ನಾಗರೀಕರು ಪಾಲ್ಗೊಳ್ಳಬಹುದು ಎಂದರು.

45 ವರ್ಷ ಮೇಲ್ಪಟ್ಟ 60 ವರ್ಷದೊಳಗಿನ ಸ್ಪರ್ಧಾರ್ಥಿಗಳಿಗೆ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. 60 ವರ್ಷ ಮೇಲ್ಪಟ್ಟ 80 ವರ್ಷದೊಳಗಿನ ಸ್ಪರ್ಧಾರ್ಥಿಗಳಿಗೆ ಮತ್ತೊಂದು ವಿಶೇಷ ವಿಭಾಗ ಸೇರಿಸಲಾಗಿದೆ. ಈ ವಯೋಮಾನದ ಹಿರಿಯ ಸ್ಪರ್ಧಿಗಳು ತಮ್ಮ ವಯಸ್ಸಿನ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್, ವೋಟರ್‌ಐಡಿ ಸೇರಿದಂತೆ ಸರ್ಕಾರದ ಯಾವುದಾದರೊಂದು ವಯಸ್ಸಿನ ದೃಢೀಕರಣದ ದಾಖಲೆಯೊಂದರ ನಕಲು ಪ್ರತಿಯನ್ನು ಕಡ್ಡಾಯವಾಗಿ ನೀಡಬೇಕು.

ದಾಖಲೆ ಸಲ್ಲಿಸುವ ಸ್ಪರ್ಧಿಗಳಿಗೆ 100 ರು. ವಿಶೇಷ ರಿಯಾಯಿತಿ ನೀಡಲಾಗುವುದು. ಹಾಗಾಗಿ ಇವರು ಪ್ರವೇಶ ಶುಲ್ಕವಾಗಿ 600 ರು. ಮಾತ್ರ ಸ್ಪರ್ಧೆಗೆ ಪಾವತಿಸಿ, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು.

ಸುದ್ದಿಗೋಷ್ಠಿಯಲ್ಲಿ ಫೌಂಡೇಶನ್ ನ ಗೌರವಾಧ್ಯಕ್ಷ ಮಹೇಶ್ ಯೋಗ, ಕರ್ನಾಟಕ ರಾಜ್ಯ ಯೋಗಸ್ಪೋರ್ಟ್‌ಅಸೋಸಿಯೇಷನ್ ಅಧ್ಯಕ್ಷ ಯೋಗಾಚಾರ್ಯ ಡಾ.ಪಿ.ಎನ್. ಗಣೇಶ್ ಕುಮಾರ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಯೋಗ ತರಬೇತುದಾರ ರವಿ, ರಾಘವೇಂದ್ರ ಯೋಗ ಕೇಂದ್ರದ ಸಂಸ್ಥಾಪಕ ಎನ್. ಪಶುಪತಿ, ಎಸ್.ಜಿ.ಸಿ.ಎಸ್ ಯೋಗಾ ಟ್ರಸ್ಟ್ ಸಂಸ್ಥಾಪಕ ರವಣೀಕರ್, ವಿಶ್ವ ಮಾನವ ಯೋಗ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಡಾ. ಯೋಗಕುಮಾರ್, ಮಂಜುನಾಥ್ ಇದ್ದರು.

ರಾಜರ ಕಾಲದಲ್ಲಿಯೇ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಅಭಿಪ್ರಾಯ



• **ಕನ್ನಡಪ್ರಭ ವಾರ್ತೆ** ನಂಜನಗೂಡು

ಕನ್ನಡ ಭಾಷೆಯನ್ನು ಶ್ರೀಮಂತ ಗೊಳಿಸುವ ಉದ್ದೇಶದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದರು, ಕನ್ನಡ ಸಾಹಿತ್ಯ ಪರಿಷತ್ ಕೇವಲ ಸಾಹಿತ್ಯದ ವೇದಿಕೆಯಲ್ಲ ಬದಲಾಗಿ ನಮ್ಮ ಕನ್ನಡ ಭಾಷೆಯ ಅಸ್ಮಿತೆಯಾಗಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಹೇಳಿದರು.

ಪಟ್ಟಣದ ಭಾರತಿ ತೀರ್ಥ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ವಿದ್ಯಾರ್ಥಿಗಳಿಗೆಪ್ರತಿಭಾಪುರಸ್ಕಾರಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಂತೀಯ ಭಾಷೆಗಳಲ್ಲಿ ಕನ್ನಡಕ್ಕೆ ತನ್ನದೇ ಆದ ಪ್ರಾಮುಖ್ಯತೆಯನ್ನು ತಂದು ಕೊಡಬೇಕು ಎಂಬ ಸದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿ, ಆ ಮೂಲಕ ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿ ಉಳಿಸಿ ಬೆಳೆಸಲು ಶ್ರಮಿಸುತ್ತಿದೆ, ನಾಲ್ವಡಿ ಅವರ ಪರಿಶ್ರಮದಿಂದಾಗಿ ಇಂದು ಕನ್ನಡ ಭಾಷೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದೆ, ಜೊತೆಗೆ ವಿವಿಧ ರಾಜ್ಯಗಳ ಪೈಪೋಟಿಯ ನಡುವೆ ನಮ್ಮ ನಾಡಿನ ಕವಿಗಳು ಕನ್ನಡ ಭಾಷೆಗೆ 9 ಜ್ಞಾನಪೀಠ ಪ್ರಶಸ್ತಿಗಳನ್ನು ತಂದು ಕೊಡುವ ಮೂಲಕ ಕನ್ನಡ ಭಾಷೆಯ ಹಿರಿಮೆಯನ್ನು ದೇಶ ವಿದೇಶಗಳಲ್ಲಿ ಸಾರುವ ಮೂಲಕ ಕನ್ನಡ ಭಾಷೆಗೆ ತನ್ನದೇ ಆದ ಶಕ್ತಿ ಇದೆ ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದರು.

ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ದಿನೇಶ್ ಮಾತನಾಡಿ, ಮಾತೃಭಾಷೆಯಿಂದ ಮಾತ್ರ ಜೀವನದಲ್ಲಿ ಸಾಧನೆ ಸಾಧ್ಯ, ಆದ್ದರಿಂದ ವಿದ್ಯಾರ್ಥಿಗಳು ಇಂಗ್ಲೀಷ್ ವ್ಯಾಮೋಹ ಹಾಗೂ ಕೀಳರಿಮೆಯನ್ನು ಬಿಟ್ಟು, ಶ್ರದ್ಧೆ ಪರಿಶ್ರಮದಿಂದ ಕನ್ನಡ ಭಾಷೆಯನ್ನು ಬರೆದು ಓದುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು, ಆ ಮೂಲಕ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಬೇಕಿದೆ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 125 ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಕಸಾಪ ತಾಲೂಕು ಅಧ್ಯಕ್ಷ ಲತಾ ಮುದ್ದು ಮೋಹನ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್, ಬಿ.ವಿ. ರಾಘವೇಂದ್ರ, ಅನಿತಾ, ಸತೀಶ್ ದಳವಾಯಿ, ರಂಗಸ್ವಾಮಿ, ಶೋಭಾ ನಾಗಶಯನ, ಮಂಜುಳಾ ಇದ್ದರು.

ಅನಾರೋಗ್ಯದಲ್ಲಿದ್ದ 'ಬಸವ'ನ ರಕ್ಷಣೆ: ಪಶು ವೈದ್ಯಾಧಿಕಾರಿ ಕಾರ್ಯಕ್ಕೆ ಮೆಚ್ಚುಗೆ

• **ಕನ್ನಡಪ್ರಭ ವಾರ್ತೆ** ಸುತ್ತೂರು



ವರಕೂಡು ಗ್ರಾಮದದಲ್ಲಿರುವ ಶ್ರೀ ಬೀರೇಶ್ವರ ದೇವಸ್ಥಾನದಲ್ಲಿದ್ದ ಬಸವ ಹಸು, ಕಳೆದ ವಾರದಿಂದ ಬಿಸಿಲಿನ ಬೇಗೆಯ ವಾತಾವರಣದಲ್ಲಿದ್ದು, ನಿತ್ರಾಣಗೊಂಡಿದ್ದಲ್ಲದೇ, ನೀರು, ಮೇವು ತಿನ್ನದೆ ಬಳಲಿ ಬೆಂಡಾಗಿತ್ತು.

ಜಿಲ್ಲಾ ಪಶು ಇಲಾಖೆ ವೈದ್ಯಾಧಿಕಾರಿ ನಾಗರಾಜ್ ಮತ್ತು ಅವರ ತಂಡ ಸ್ಥಳಕ್ಕೆ ಆಗಮಿಸಿ ಬಸವನಿಗೆ ಪ್ರಥಮ ಚಿಕಿತ್ಸೆ ನೀಡಿದ್ದಲ್ಲದೇ, ಮುಂದುವರೆದ ಅಗತ್ಯ ಚಿಕಿತ್ಸೆ ನೀಡಿ ಆರೈಕೆ ಮಾಡಿದ್ದಾರೆ.

ಇದಾದ ಕೇವಲ ಒಂದು ಗಂಟೆಯಲ್ಲೇ ನಿತ್ರಾಣಗೊಂಡಿದ್ದ ಬಸವ ಹಸು, ಇದೀಗ ಚೇತರಿಸಿಕೊಂಡಿದ್ದು, ನೀರು, ಮೇವು ತಿನ್ನಲು ಪ್ರಾರಂಭಿಸಿದ್ದು, ಸ್ಥಳೀಯರು ಮತ್ತು ಗ್ರಾಮಸ್ಥರಲ್ಲಿ ಸಂತಸ ತರಿಸಿದೆ.

ಅನಾರೋಗ್ಯದಿಂದ ಆರೋಗ್ಯದತ್ತ ಮುಖ ಮಾಡಿದ ಹಸು ಮತ್ತೆ ಚೇತರಿಸಿಕೊಂಡು ಓಡಾಡಲು ಪ್ರಾರಂಭಿಸಿದ್ದು, ಗ್ರಾಮಸ್ಥರಿ ಗೆ ಅಪಾರ ಸಂತೋಷ ನೀಡಿದೆ.

ಸಾವಿನ ದವಡೆಯಲ್ಲಿದ್ದ ಬಸವನನ್ನು ಬದುಕುಳಿಸಲು ಮುಂದಾದ ಪಶು ವೈದ್ಯಾಧಿಕಾರಿ ನಾಗರಾಜು ಅವರ ಕಾರ್ಯವೈಖರಿಗೆ ಗ್ರಾಮಸ್ಥರು ಹಾಗೂ ದೇವಸ್ಥಾನ ಸಮಿತಿ ಅಭಿನಂದಿಸಿದ್ದಾರೆ.

ನಾಳೆ ಜನಸಂಪರ್ಕ ಸಭೆ ಆಯೋಜನೆ

ಮೈಸೂರು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ. 58ರ ರಾಮಕೃಷ್ಣನಗರ 'ಎಚ್' ಬ್ಲಾಕ್ ಸಾಲುಮರದ ತಿಮ್ಮಕ್ಕ ಪಾರ್ಕ್ ನಲ್ಲಿ ಜನ ಸಂಪರ್ಕ ಸಭೆಯನ್ನು ಶಾಸಕ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಮೇ 7 ರಂದು ಸಂಜೆ 5ಕ್ಕೆ ಆಯೋಜಿಸಲಾಗಿದೆ. ಸಭೆಯಲ್ಲಿ ಜಿಲ್ಲಾಧಿಕಾರಿ, ನಗರ ಪಾಲಿಕೆ ಆಯುಕ್ತರು, ಎಂಡಿಎ ಆಯುಕ್ತರು, ಪೊಲೀಸ್ ಆಯುಕ್ತರು, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಳ್ಳುವರು. ಸಾರ್ವಜನಿಕರು ಇದರ ಸದುಪಯೋಗಪಡೆಯಬಹುದು.

ಗಾನಭಾರತೀಯಲ್ಲಿ ಸಂಗೀತ ಕಾರ್ಯಕ್ರಮ

ಮೈಸೂರು: ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆಶೇಷಣ್ಣ ಭವನದ ಗಾನಭಾರತೀಯಲ್ಲಿ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮೇ 6ರ ಸಂಜೆ 6ಕ್ಕೆ ಎನ್.ಸಿ. ರಂಗಾಚಾರ್ಯುಲು- ಗಾಯನ ಪ್ರಸ್ತುತಪಡಿಸುವರು. ಟಿ.ಕೆ.ವಿ. ರಾಮಾನುಜಾಚಾರ್ಯುಲು-ಪಿಟೀಲು, ಎ. ರಾಧೇಶ್‌ಮೃದಂಗ ಹಾಗೂ ಎಸ್. ಮಂಜುನಾಥ್‌ಘಟ ನುಡಿಸುವರು. ಮೇ 22ರ ಸಂಜೆ 6ಕ್ಕೆ ಅನಘ ಭಾರದ್ವಾಜ್‌ಗಾಯನ, ಸಂಜೆ 7.15ಕ್ಕೆ ಎಂ.ಎಸ್. ಕೀರ್ತನಾ- ಗಾಯನ, ಪ್ರೇರಣ- ಪಿಟೀಲು, ಎಂ.ಸಿ. ಸುಮುಖಶೇಷ- ಮೃದಂಗ ಪ್ರಸ್ತುತಪಡಿಸುವರು. ಮೇ 29ರ ಸಂಜೆ 6ಕ್ಕೆ ಶ್ರೀ ಬಿ.ಎಸ್. ರಾಮಾನುಜ ಅಯ್ಯಂಗಾರ್ ಸಂಸ್ಮರಣಾ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮನೋಜ್‌ಚಿಂತನಪಲ್ಲಿ- ಗಾಯನ, ಅಮೋಘ್ ನಡಾದೂರ್‌ಪಿಟೀಲು, ವಿಕ್ರಂ ಭಾರದ್ವಾಜ್ - ಮೃದಂಗ ಪ್ರಸ್ತುತ ಪಡಿಸುವರು.

ಮರಗಳ ತೆರವಿಗೆ ಅರಣ್ಯ ಇಲಾಖೆ ಪ್ರಕಟಣೆ; ಅಹವಾಲಿಗೆ ಅವಕಾಶ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಲಯ ವ್ಯಾಪ್ತಿಯ ಸ್ಥಳಗಳಲ್ಲಿ ರಸ್ತೆ ಕಾಮಗಾರಿಗೆ ಅಡಚಣೆಯಾಗಿರುವ ವಿವಿಧ ಜಾತಿಯ ಮರಗಳನ್ನು ತೆರವುಗೊಳಿಸಿಕೊಡುವಂತೆ ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅವರು ಮನವಿ ಮಾಡಿದ್ದು, ಈ ಸಂಬಂಧ ಅರಣ್ಯಾಧಿಕಾರಿ ಕಚೇರಿ ಮೈಸೂರು ವಲಯ ದಲ್ಲಿ ಸಾರ್ವಜನಿಕರಿಗಾಗಿ ಅಹವಾಲು ಪೆಟ್ಟಿಗೆ ಇರಿಸಲಾಗಿದೆ.

ಸಾರ್ವಜನಿಕರು ತಮ್ಮ ಅಹವಾಲನ್ನು ಪತ್ರದ ಮೂಲಕ ಪೆಟ್ಟಿಗೆಯಲ್ಲಿ ಮೇ 7ರ ಸಂಜೆ 5.30 ರವರೆಗೆ ಸಲ್ಲಿಸಬಹುದು. ಇ- ಮೇಲ್: ಟಿಇಢಂಟಟ್ಟಿಭಿ123ಃಜಿಇಚಜ್ಞಿ.ಟಿಇ ಹಾಗೂ ವೃಕ್ಷಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ, ಮೈಸೂರು ಪ್ರಾದೇಶಿಕ ವಲಯ, ಅರಣ್ಯ ಭವನ, ಅಶೋಕಪುರಂ -570008 ಅಂಚೆ ವಿಳಾಸಕ್ಕೆ ನಿಗದಿತ ಸಮಯ ಹಾಗೂ ದಿನಾಂಕದೊಳಗೆ ಆಕ್ಷೇಪಣೆ ಸಲ್ಲಿಸಬಹುದು.

ನಗರದ ಸಿದ್ದಿಕಿ ನಗರ, ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಹತ್ತಿರ ಎನ್.ಎಚ್- 275ರ ಬೆಂಗಳೂರಿನಿಂದ-ಮೈಸೂರು ವಿಭಾಗದ ಕಿ.ಮೀ. 18 ರಿಂದ 135.304 ಕಿ.ಮೀ ವರೆಗಿನ ನಾಲ್ಕು ಪಥಗಳ ಫ್ಲೈ-ಓವರ್‌ರಸ್ತೆ ಕಾಮಗಾರಿಗೆ ಅಡಚಣೆ ಆಗಿರುವ ಮರಗಳ ವಿವರ: ಸಿದ್ದಿಕಿ ನಗರ ವಯಾ ಮೈಸೂರು ಫೌಂಟೇನ್ ಸರ್ಕಲ್ ರಸ್ತೆ- 19, ವಯಾ ಬನ್ನಿಮಂಟಪ ರಸ್ತೆ ಪಾರ್ಕ್ ಆವರಣದಲ್ಲಿನ ಗಿಡ/ ಮರಗಳು- 256, ವಯಾ ಹುಣಸೂರು ರಸ್ತೆ ಮಧ್ಯ ಭಾಗದ ಗಿಡ/ ಮರಗಳು-52, ವಯಾ ನಂಜನಗೂಡು ರಸ್ತೆ ಮಧ್ಯ ಭಾಗದ ಮರಗಳು- 20 ಮೈಸೂರು- ನಂಜನಗೂಡು ರಾಷ್ಟ್ರೀಯ ಹೆದ್ದಾರಿ ರಸ್ತೆ ಕಾಮಗಾರಿ ಅಡಚಣೆಯಾದ ಟಿ.ವಿ.ಎಸ್ ವೃತ್ತ ಕಡಕೊಳ ಮತ್ತು ಮಂಡಕಳ್ಳಿ ರಸ್ತೆ ಕಾಮಗಾರಿಗೆ ಅಡಚಣೆಯಾಗಿರುವ ಮರಗಳ ವಿವರ: ಟಿ.ವಿ.ಎಸ್ ವೃತ್ತ ಕಡಕೊಳ-11, ಮಂಡಕಳ್ಳಿ-04, ಕೇರಳದ ಗಡಿಯಿಂದ ಕೊಳ್ಳೇಗಾಲದ ರಸ್ತೆ ಕಾಮಗಾರಿಗೆ ಅಡಚಣೆಯಾಗಿರುವ ಮರಗಳ ವಿವರ: ವರುಣ ವೃತ್ತದಲ್ಲಿನ ರಸ್ತೆ ಕಾಮಗಾರಿಗೆ ಅಡಚಣೆಯಾಗಿರುವ ಮರಗಳು- 26, ದುದ್ದಗೆರೆ-ಪುಟ್ಟೇಗೌಡನಹುಂಡಿ ರಸ್ತೆ ಕಾಮಗಾರಿಗೆ ಅಡಚಣೆಯಾಗಿರುವ ಮರಗಳು- 110, ಎಂ.ಸಿ. ಹುಂಡಿ ರಸ್ತೆ ಕಾಮಗಾರಿಗೆ ಅಡಚಣೆಯಾಗಿರುವ 60 ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ ಎಂದು ವೃಕ್ಷಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ ತಿಳಿಸಿದ್ದಾರೆ.

ಸುದ್ದಿ ಸಿಂಚನ

ಇಂದು ಸಿದ್ದರಾಮೇಶ್ವರ ಜಯಂತಿ ಆಯೋಜನೆ

ಮೈಸೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯುತ್ಸವ ಸಮಿತಿ ಸೇರಿ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಮೇ 6ರಂದು ಬೆಳಗ್ಗೆ 10.30ಕ್ಕೆ ಕಲಾ ಮಂದಿರದಲ್ಲಿ ಸಿದ್ದರಾಮೇಶ್ವರ ಜಯಂತಿ ಆಯೋಜಿಸಲಾಗಿದೆ ಎಂದು ರಾಜ್ಯ ಭೋವಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮೇಶ್ವರ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಡಿಸಿಎಂ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಶಿವರಾಜ್ ತಂಗಡಗಿ ಪಾಲ್ಗೊಳ್ಳುವರು. ಶಾಸಕ ಕೆ. ಹರೀಶ್ ಗೌಡ ಅಧ್ಯಕ್ಷತೆ ವಹಿಸುವರು. ಇದಕ್ಕೂ ಮೊದಲು ಬೆಳಗ್ಗೆ 9ಕ್ಕೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಬಳಿಯಿಂದ ಭವ್ಯ ಮೆರವಣಿಗೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೀತಾರಾಮು, ಎಸ್. ವಿಜಯಕುಮಾರ್, ಮಲ್ಲಣ್ಣ, ರವಿ ಪೂಜಾರಿ ಇದ್ದರು.

ಇಂದಿನಿಂದ ಊಟಿಯಲ್ಲಿ ಜೀವನೋತ್ಸಾಹ ಶಿಬಿರ

ಮೈಸೂರು: ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ವತಿಯಿಂದ ಊಟಿಯಲ್ಲಿ ಜೀವನೋತ್ಸಾಹ ಶಿಬಿರವನ್ನು ಮೇ 6 ರಿಂದ 11ರವರೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ. ನಿವೃತ್ತ ಐಜಿಪಿ ಡಿ.ಎನ್. ಮುನಿಕೃಷ್ಣ ಅವರು ಶಿಬಿರ ಉದ್ಘಾಟಿಸುವರು. ಭಾರತೀಯ ಸೇನೆಯ ಸೇನಾ ಪದಕ ಪುರಸ್ಕೃತ ಪಿ.ಎಲ್. ರಾಘವೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿ ಕೆ.ಸಿ. ವಿರೂಪಾಕ್ಷ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಶಿಬಿರದಲ್ಲಿ ಡಾ. ಬಸವ ಮರುಳಸಿದ್ಧ ಸ್ವಾಮೀಜಿ, ಮಹೇಶ್ ಮಾಶಾಳ, ಡಾ.ಹಿ.ಚಿ. ಬೋರಲಿಂಗಯ್ಯ, ವಿಶ್ವನಾಥ್ ಎಂ. ಹಿರೇಮಠ, ಎಂ.ಡಿ. ಶರತ್, ಡಾ. ಶರತ್ ಚಂದ್ರ ಸ್ವಾಮೀಜಿ, ಡಾ. ರಾಹುಲ್ ದೇವರಾಜ್, ವಿಶ್ವೇಶ್ವರ ಭಟ್, ಕುಸುಮ ಆಯರಹಳ್ಳಿ, ಕೋಟ್ರಾ ಮಳವಳ್ಳಿ ಮತ್ತು ಬೇಲೂರು ರಾಮಮೂರ್ತಿ ಅವರು ಕ್ರಮವಾಗಿ ಶಿವಯೋಗ, ಸಹನಶೀಲತೆ, ಜಾನಪದ ಬದುಕು, ಕೂಡುಕುಟುಂಬ, ಅಂತರ್ಜಾಲದ ಆತಂಕಗಳು, ಲೌಕಿಕದಿಂದ ಲೌಕಿಕದೆಡೆಗೆ, ಭಾರತೀಯ ಸಂಸ್ಕೃತಿ, ಬದುಕು ಹೇಗಿದ್ದರೆಚೆಂದ, ವಚನ ಸಂಸ್ಕೃತಿ, ನೈಜ ಸುದ್ದಿಗಳು ಮತ್ತು ನಕ್ಕರೆ ಸ್ವರ್ಗ ವಿಷಯ ಕುರಿತು ಉಪನ್ಯಾಸ ನೀಡುವರು. 11 ರಂದು ಶಿಬಿರದ ಸಮಾರೋಪ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಪ್ರತಿದಿನ ಸಾಮೂಹಿಕ ಪ್ರಾರ್ಥನೆ, ಯೋಗ ಮತ್ತು ಧ್ಯಾನ, ದೇಸಿ ಆಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಇರುತ್ತದೆ.

ಡಿಪ್ಲೊಮಾ ಪ್ರವೇಶಾತಿಗೆ ಅರ್ಹರಿಂದ ಅರ್ಜಿ ಅಹ್ವಾನ

ಮೈಸೂರು: ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ 2026-27ನೇ ಸಾಲಿನ ಎಸ್ಸೆಸ್ಸೆಲ್ಸಿ ನಂತರದ ಪೂರ್ಣಾವಧಿಯ ಸಂಸ್ಥೆಯಲ್ಲಿನ ಎಂಜಿನಿಯರಿಂಗ್ ವಿಭಾಗದ ಪ್ರಥಮ ವರ್ಷದ (1) ಆಟೋಮೊಬೈಲ್ ಎಂಜಿನಿಯರಿಂಗ್ (2) ಸಿವಿಲ್ ಎಂಜಿನಿಯರಿಂಗ್ (3) ಕಂಪ್ಯೂಟರ್‌ಸೈನ್ಸ್‌ಎಂಜಿನಿಯರಿಂಗ್ (4) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ಎಂಜಿನಿಯರಿಂಗ್ (5) ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (6) ಮೆಕ್ಯಾನಿಕಲ್ ಎಂಜಿನಿಯರಿಂಗ್ (7) ಮಷಿನ್ ಟೂಲ್ ಟೆಕ್ನಾಲಜಿ ಮತ್ತು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅಂಡ್ ಮಷಿನ್ ಲರ್ನಿಂಗ್ ಡಿಪ್ಲೋಮಾ ಕೋರ್ಸುಗಳಿಗೆ ಮೆರಿಟ್ ಆಧಾರಿತ ಆನ್-ಲೈನ್ ಮೂಲಕ ಪ್ರವೇಶ ನೀಡಲಾಗುವುದು.ಈ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಇಲಾಖೆಯ ಅಧಿಕೃತ ವೆಬ್ ಸೈಟ್ ನಿಂದ ಅರ್ಜಿಯನ್ನು ಡೌನ್ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿ ಮತ್ತು ಆದ್ಯತಾ ಪಟ್ಟಿಯನ್ನು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರಿಗೆ ಮೇ 16ರ ಸಂಜೆ 5 ಗಂಟೆವರೆಗೆ ಸಲ್ಲಿಸಬಹುದು. ಅಭ್ಯರ್ಥಿಗಳು ನೀಡುವ ಆದ್ಯತೆ ಅನುಸಾರವಾಗಿ ಮೆರಿಟ್ ಹಾಗೂ ರೋಸ್ಟರ್ ಅನುಗುಣವಾಗಿ ಆನ್ ಲೈನ್ ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ನಾನ್ ಎಂಜಿನಿಯರಿಂಗ್ ಪ್ರಥಮ ವರ್ಷದ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟಿಸ್ (ಕನ್ನಡ) ಮತ್ತು ಕಮರ್ಷಿಯಲ್ ಪ್ರಾಕ್ಟಿಸ್ (ಇಂಗ್ಲಿಷ್) ಕೋರ್ಸುಗಳಿಗೆ ಮೆರಿಟ್ ಹಾಗೂ ರೋಸ್ಟರ್ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಗೆ ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ಆಫ್ ಲೈನ್ ಮೂಲಕ ಪ್ರವೇಶ ನೀಡಲಾಗುವುದು. ಹೆಚ್ಚಿನ ಮಾಹಿತಿಯನ್ನು ಸಾರ್ವಜನಿಕರು ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್ ಗಳಲ್ಲಿ ಪಡೆಯಬಹುಜುಯ ಕಾಲೇಜು ತಾಂತ್ರಿಕ ಇಲಾಖೆಯ ಮತ್ತು ಶಿಕ್ಷಣ detch.karnakata.gov.in ಮತ್ತು dtek.karnataka.gov.in ಈ ವೆಬ್ ಸೈಟ್ ಸಂಪರ್ಕಿಸಬಹುದು ಎಂದು ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಪ್ರಾಂಶುಪಾಲರು ತಿಳಿಸಿದ್ದಾರೆ.

ಕಸಾಪ ಸ್ಥಾಪಿಸಿದ 'ನಾಲ್ವಡಿ' ಸದಾ ಸ್ಮರಣೀಯರು

ಜಿಲ್ಲಾ ಘಟಕದಿಂದ ಸಂಸ್ಥಾಪನಾ ದಿನಾಚರಣೆ | ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಎಸ್‌ಎಸ್‌ಎಲ್‌ಸಿ, ಪಿಯುಸಿ ಅತ್ಯುತ್ತಮ ಅಂಕ ಪಡೆದವರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸದಾ ಸ್ಮರಣೀಯರು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪುರಸ್ಕೃತರು ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನೂರು ಸದಸ್ಯರಿಂದ ಆರಂಭವಾದ ಕನ್ನಡ ಸಾಹಿತ್ಯ ಪರಿಷತ್ ಇಂದು ಏಷ್ಯಾ ಖಂಡದಲ್ಲಿಯೇ ಅತೀ ಹೆಚ್ಚು ಸದಸ್ಯರನ್ನು ಒಳಗೊಂಡಿದೆ. ದತ್ತಿ ದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೋಟಿ ರು. ವರೆಗೂ ದತ್ತಿ ಇರಿಸಿದ್ದಾರೆ. ನಾಡಿನ ಅತ್ಯುತ್ತಮ ಕೃತಿಗಳನ್ನು ಪರಿಚಯಿಸಿದೆ. ನಾಲ್ವಡಿ ಮತ್ತು ವಿಶ್ವೇಶ್ವರಯ್ಯ ಅವರು ಕಟ್ಟಿರುವ ಸಂಸ್ಥೆಗೆ ಎಂದಿಗೂ ಸೋಲಿಲ್ಲ ಎಂದರು.

ಮುಖ್ಯ ಅತಿಥಿಯಾಗಿದ್ದ ಜಿಲ್ಲಾಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಇಂದು ಜಗತ್ತಿನಲ್ಲಿ ಯಾರು ಏನೂ ಬೇಕಾದರೂ ಆಗಬಹುದು. ಆದರೆ, ಮನುಷ್ಯ ಆಗುವುದು ಬಹಳ ಮುಖ್ಯ ಎಂದರು.

ವಿದ್ಯಾರ್ಥಿಗಳು ಕೌಶಲ್ಯ ವೃದ್ದಿಸಿಕೊಳ್ಳಬೇಕು. ಡಿಜಿಟಲ್ ಯುಗದಲ್ಲಿ ಕೌಶಲ್ಯ ಬಹಳ ಮುಖ್ಯವಾಗಿದ್ದು, ಅದಕ್ಕೆ ತಕ್ಕಂತೆ ಡಿಜಿಟಲ್ ಜ್ಞಾನ ವೃದ್ಧಿಸಿಕೊಳ್ಳಿ ಪ್ರಮುಖವಾಗಿ ಸಮಯ ಪಾಲನೆ ಮಾಡಿ ಎಲ್ಲರಿಗಿಂತಲೂ ವಿಭಿನ್ನವಾಗಿ ಆಲೋಚನೆ ಮಾಡಬೇಕು ಎಂದು ಸಲಹೆ ನೀಡಿದರು.

ಡಿಡಿಪಿಐ ಉದಯ ಕುಮಾರ್ ಮಾತನಾಡಿ, ಸೇವಾ ಮತ್ತು ಶಿಕ್ಷಣ ಕ್ಷೇತ್ರವನ್ನು ಗುರುತಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗೌರವಿಸಿದ್ದಾರೆ. ಇದರಿಂದ ಶಿಕ್ಷಣ ಇಲಾಖೆಗೆ ಹೆಮ್ಮೆ ಆಗಿದೆ. ಮಕ್ಕಳ ಸಾಧನೆ ಗುರುತಿಸಿದರೆ ಅವರ ಸಾಧನೆಗೆ ಸಾಥ್ ನೀಡಿದಂತೆ ಕಾಣುತ್ತದೆ. ಮೈಸೂರು ಜಿಲ್ಲೆ 21 ಸಾವಿರ ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಐದು ನೂರಕ್ಕೂ ಹೆಚ್ಚು ಮಂದಿ 600ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಜಿಲ್ಲೆ ಒಟ್ಟಾರೆ ಉತ್ತಮ ಫಲತಾಂಶ ಗಳಿಸಿದೆ ಮುಂದಿನ ದಿನಗಳಲ್ಲಿ ಮತ್ತಷ್ಟು ಶ್ರಮ ವಹಿಸಲಾಗುತ್ತದೆ ಎಂದರು.



ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಅಂಕ ಪಡೆದವರನ್ನು ಜಿಲ್ಲಾ ಕಸಾಪ ವತಿಯಿಂದ ಮಂಗಳವಾರ ಸನ್ಮಾನಿಸಲಾಯಿತು. ಮಡ್ಡೀಕೆರೆ ಗೋಪಾಲ್, ಕೆ. ದೀಪಕ್, ಮೂಗೂರು ನಂಜುಂಡಸ್ವಾಮಿ, ಮ.ನ. ಲತಾ ಮೋಹನ್, ಜಯಪ್ಪ ಹೊನ್ನಾಳಿ, ರಾಜಶೇಖರ ಕದಂಬ, ಎನ್. ಅನಂತ ಇದ್ದರು.

> ಕಸಾಪ ಕನ್ನಡ ಸೇವೆಯ ಜೊತೆಗೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದು ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದೆ.
> • **ಮಡ್ಡೀಕೆರೆ ಗೋಪಾಲ್**
> ಜಿಲ್ಲಾ ಕಸಾಪ ಅಧ್ಯಕ್ಷ

ಇಂದಿನ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತಿದ್ದಾರೆ ಇದು ಉತ್ತಮ ಬೆಳವಣಿಗೆ. ಆದರೆ, 7.8.9 ನೇ ತರಗತಿ ಮಕ್ಕಳಿಗಳನ್ನು ಗಣನೆಗೆ ತೆಗೆದುಕೊಂಡು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಶಾಲೆಗಳಲ್ಲಿ ಕನ್ನಡ ಕುರಿತಂತೆವಿದ್ಯಾರ್ಥಿಗಳಿಗೂ ಸಂವಾದ, ವಿಶೇಷ ಯೋಜನೆಗಳನ್ನು ಆಯೋಜಿಸಿ ಎಂದರು.

ರಾಜ್ಯ ರಾಜ್ಯೋತ್ಸವ ಪುರಸ್ಕೃತರಾದ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನಂದೀಧ್ವಜ ರೂವಾರಿ ಉಡಿಗಾಲ ಮಹದೇವಪ್ಪ, ರಂಗಕರ್ಮಿ ಮೈಮ್ ರಮೇಶ್, ಅಂತಾರಾಷ್ಟ್ರೀಯ ಅಥ್ಲೆಟ್ ಎಂ.ಯೋಗೇಂದ್ರ. ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯ ಮಟ್ಟದಲ್ಲಿ ಉನ್ನತ ಸ್ಥಾನ ಪಡೆದ ಕೆಪಿಎಸ್ ಇಲವಾಲದ ಆರ್. ಮಾಧುರಿ, ವಿಜಯವಿಠಲ ವಿದ್ಯಾಶಾಲೆಯ ಮನಸ್ವಿನಿ ಪ್ರದೀಪ್, ಕೆ.ಆರ್. ನಗರ ಬಿ.ಎಸ್. ಮಾದಪ್ಪ ಸ್ಮಾರಕ ವಿದ್ಯಾಸಂಸ್ಥೆಯ ಡಿ.ಜಿ.ವಿನುತ, ಪಿಎಂಸಿ ಆದರ್ಶ ವಿದ್ಯಾಲಯದ ಎಂ.ಎಸ್.ಲಕ್ಷಣ್ ಹಾಗೂ ಪಿಯುಸಿಯಲ್ಲಿ ಸಾಧನೆ ಮಾಡಿರುವ ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು ವಾಣಿಜ್ಯ ವಿಭಾಗದ ಮಹಮದ್ ಮೆಹರಾನ್, ಹುಣಸೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಕಲಾ ವಿಭಾಗದ ಕೆ.ಎಲ್.ಶ್ರಾವ್ಯ, ಮಹಾರಾಣಿ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ಉಮ್ಮೆ ಕುಲ್‌ಸುಮ್, ವಾಣಿಜ್ಯ ವಿಭಾಗದ ಗುಲ್ಸುಮ್, ಕೆ.ಆರ್. ನಗರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ಎಸ್.ತನ್ಮಯಿ ಅವರನ್ನು ಅಭಿನಂದಿಸಲಾಯಿತು.

ಹೇಮಲತಾ ಕುಮಾರಸ್ವಾಮಿ ಪ್ರಾರ್ಥಿಸಿದರು. ಮಹಾರತ್ನ ಟ್ರಸ್ಟ್ ಮತ್ತು ಲೀಲಾವತಿ ತಂಡದವರು ನಾಡಗೀತೆ ಹಾಡಿದರು. ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮ.ನ. ಲತಾ ಮೋಹನ್ ಸ್ವಾಗತಿಸಿದರು. ಎನ್. ಅನಂತ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ ವಂದಿಸಿದರು. ಕಾರ್ಯದರ್ಶಿ ಜಯಪ್ಪ ಹೊನ್ನಾಳಿ, ಕೋಶಾಧ್ಯಕ್ಷ ಜಿ. ಪ್ರಕಾಶ್, ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ರಂಗನಾಥ್ ಮೈಸೂರು, ಎಂ.ವಿ. ನಾಗೇಂದ್ರ ಬಾಬು ಮೊದಲಾದವರು ಇದ್ದರು.

ಸ್ವಾಸ್ಥ್ಯ ಸ್ವರಾಜ್ ಅಭಿಯಾನಕ್ಕೆ ಚಾಲನೆ

ಸಾರ್ವಜನಿಕರಲ್ಲಿ ಆರೋಗ್ಯ ಅರಿವು ಮೂಡಿಸಲು ವಿನೂತ ಕಾರ್ಯಕ್ರಮ ಆಯೋಜನೆ

• **ಕನ್ನಡಪ್ರಭ ವಾರ್ತೆ** ಹುಣಸೂರು

ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಮತ್ತು ಸಮುದಾಯದ ಸಹಭಾಗಿತ್ವವನ್ನು ಹೆಚ್ಚಿಸುವ ಉದ್ದೇಶದ ಸ್ವಾಸ್ಥ್ಯ ಸ್ವರಾಜ್- ನಮ್ಮ ಆರೋಗ್ಯ, ನಮ್ಮ ಕ್ರಿಯಾಯೋಜನೆ ಅಭಿಯಾನದ ವಿದ್ಯುನ್ಮಾನ ಮಾಹಿತಿ ಫಲಕ ಹಾಗೂ ನನ್ನ ಸ್ವಾಸ್ಥ್ಯ - ನನ್ನ ಆರೋಗ್ಯ ದಿನಚರಿ ಸಮರ್ಪಣಾ ಕಾರ್ಯಕ್ರಮವು ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದಲ್ಲಿ ಗ್ರಾಮ್ ಸಂಸ್ಥೆ, ಆರೋಗ್ಯ ಇಲಾಖೆ, ಪಂಚಾಯತ್ ರಾಜ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳ ಆರೋಗ್ಯ ರಕ್ಷಣೆಗಾಗಿ ಸುಮಾರು 22,000 ಆರೋಗ್ಯ ದಿನಚರಿಗಳನ್ನು ವಿತರಿಸುವ ಅಭಿಯಾನಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಲಾಯಿತು.



ಸಾರ್ವಜನಿಕರಲ್ಲಿ ಆರೋಗ್ಯ ಅರಿವು ಮೂಡಿಸಲು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಡಿಜಿಟಲ್ ಡಿಸ್ ಪ್ಲೇ ಮತ್ತು ಟೂಲ್ ಕಿಟ್ ಒದಗಿಸಲಾಯಿತು.

ಗ್ರಾಮ್‌ಸಂಸ್ಥೆಯಕಾರ್ಯನಿರ್ವಾಹಕ ನಿರ್ದೇಶಕ ಡಾ. ಬಸವರಾಜ್ ಆರ್. ಶ್ರೇಷ್ಠ ಮಾತನಾಡಿ, ಆರೋಗ್ಯ ಇಲಾಖೆ ಚಿಕಿತ್ಸೆ ನೀಡಿದರೆ, ರೋಗ ತಡೆಗಟ್ಟುವಿಕೆ ಸಮುದಾಯದ ಜವಾಬ್ದಾರಿಯಾಗಿದೆ. ಹುಣಸೂರು ಮತ್ತು ಮಧ್ಯಪ್ರದೇಶದ ವಿದಿಶಾದಲ್ಲಿ ಪ್ರಾಯೋಗಿಕವಾಗಿ ಜಾರಿಯಾಗಿರುವ ಈ ಯೋಜನೆ ಇಡೀ ದೇಶಕ್ಕೆ ಮಾದರಿಯಾಗಲಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ನಾಗರಾಜ್ ಅಸಾಂಕ್ರಾಮಿಕ ರೋಗಗಳ (ಮಧುಮೇಹ, ಕ್ಯಾನ್ಸರ್) ಅಪಾಯದ ಬಗ್ಗೆ ಎಚ್ಚರಿಸಿದರು. ಗ್ರಾಮ ಆರೋಗ್ಯ ಸಮಿತಿಗಳ ಬಲವರ್ಧನೆಯ ಅಗತ್ಯತೆ ಒತ್ತಿ ಹೇಳಿದರು. ಪಂಚಾಯತ್ ರಾಜ್ ಆಯುಕ್ತಾಲಯದ ಉಪ ನಿರ್ದೇಶಕ ಕೃಷ್ಣಕುಮಾರ್‌ಅವರು ಇಲಾಖೆಗಳ ನಡುವಿನ ಸಮನ್ವಯವನ್ನು ಶ್ಲಾಘಿಸಿ, ಆರೋಗ್ಯ ಸೂಚ್ಯಂಕಗಳ ಸುಧಾರಣೆಗೆ ಇದು ಪೂರಕ ಎಂದರು. ಕಾರ್ಯಕ್ರಮದಲ್ಲಿ ತಾಪಂ ಇಒ ಹೊಂಗಯ್ಯ, ಟಿಎಚ್‌ಒ ಡಾ. ದರ್ಶನ್, ಸಿಡಿಪಿಒ ಹರೀಶ್ ಸೇರಿದಂತೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟದ ಸದಸ್ಯರು ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರಿನಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಪದಾಧಿಕಾರಿಗಳು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿಎಚ್‌ಒ ಕಚೇರಿ ಬಳಿ ಪ್ರತಿಭಟಿಸಿದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ಆಶಾ ಕಾರ್ಯಕರ್ತೆಯರಿಗೆ ಬಾಕಿ ಇರುವ 3 -4ತಿಂಗಳವರೆಗಿನಕೇಂದ್ರದಪ್ರೋತ್ಸಾಹಧನ, 1 -2 ತಿಂಗಳ ಗೌರವ ಧನವನ್ನು ಕೂಡಲೇ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾಕಾರ್ಯಕರ್ತೆಯರು ಮಂಗಳವಾರ ಡಿಎಚ್‌ಒ ಕಚೇರಿ ಎದುರು ಪ್ರತಿಭಟಿಸಿದರು.

ಇಎಂಎಸ್ ಮತ್ತು ಆಶಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಏ.21ರಂತೆ ಒಂಬತ್ತು ವಿವಿಧ ಆಶಾ ಸೇವೆಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರೀಯಗೊಳಿಸಿದ್ದಾರೆ. ಇದರಿಂದ ಪ್ರತಿ ಕಾರ್ಯಕರ್ತೆಯರಿಗೆ 500- 1000 ರು.ವರೆಗೆಪ್ರೋತ್ಸಾಹಧನಕಡಿತವಾಗಲಿದೆ. ಈ ಸೇವೆ ಮುಂದುವರೆಸಿ, ಪ್ರೋತ್ಸಾಹ ಧನ ನೀಡಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದಾದ್ಯಂತ ಕೇಂದ್ರದ ಪ್ರೋತ್ಸಾಹ ಧನ ಆಶಾ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಬರುತ್ತಿಲ್ಲ. ಈ ಸಮಸ್ಯೆ ಬಗೆಹರಿಸಿ, ಆಶಾಗಳಿಗೆ ಕೂಡಲೇ ಬಾಕಿ ಇರುವ ಪ್ರೋತ್ಸಾಹ ಧನ ನೀಡಬೇಕು. ಹಲವು ವರ್ಷಗಳಿಂದ ಬಾಕಿಇರುವವಿವಿಧಕಂಪೋನೆಂಟ್ ಗಳನ್ನು ಬಿಡುಗಡೆಗೊಳಿಸಿಲ್ಲ. ಸಮಸ್ತ ಆ್ಯಪ್ ಮೂಲಕ ದಾಖಲಾತಿ ಮಾಡಿಸುವುದನ್ನು ಕೈಬಿಡಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಸಮಿತಿ ಪದಾಧಿಕಾರಿಗಳು ಇದ್ದರು.

ಶುಶ್ರೂಷಕರದ್ದು ಉದಾತ್ತ ಸೇವೆ: ಪ್ರೊ.ಜೋಸೆಫ್ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಶುಶ್ರೂಷಕರ ಸೇವೆ ಉದಾತ್ತ ಸೇವೆ ಎಂದು ಬೆಂಗಳೂರಿನ ಗಾರ್ಡನ್ ಸಿಟಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಜಿ. ಜೋಸೆಫ್ ತಿಳಿಸಿದರು.

ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಮೂಹದ ಆಶ್ರಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಇತ್ತೀಚೆಗೆ ಸುಯೋಗ್ ಕಾಲೇಜ್ ಆಫ್ ನರ್ಸಿಂಗ್‌ನ ಬಿಎಸ್ಸಿ ನರ್ಸಿಂಗ್ ಮತ್ತು ಸುಯೋಗ್ ಇನ್ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ನ ಪದವೀಧರರಿಗೆ ಘಟಿಕೋತ್ಸವ ಸಮಾರಂಭದಲ್ಲಿ 80 ಪದವೀಧರರಿಗೆ ಪದವಿ ಪ್ರದಾನ ಮಾಡಿದ ನಂತರ ಅವರು ಮಾತನಾಡಿದರು.

ಇಡೀ ಪ್ರಪಂಚದಲ್ಲಿ ಶುಶ್ರೂಷಕರ ಸೇವೆ ಉದಾತ್ತ ಸೇವೆಯಾಗಿದ್ದು, ಪ್ರಪಂಚದಾದ್ಯಂತ ಶುಶ್ರೂಷಕರಿಗೆ ಬಹು ಬೇಡಿಕೆ ಇದೆ ಎಂದರು. ಮಾನವೀಯತೆಯನ್ನು ಮೆರೆದ ಫ್ಲಾರೆನ್ಸ್ ನೈಟಿಂಗೇಲ್ ಅವರ ಆದರ್ಶನೀಯ ಗುಣಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.



ಮುಖ್ಯಅತಿಥಿಯಾಗಿದ್ದ ಸುತ್ತೂರು ಜೆಎಸ್‌ಎಸ್ ಸಂಸ್ಥೆಯ ಸಹಾಯಕ ಆಡಳಿತಾಧಿಕಾರಿ ಜಿ.ಎಲ್. ತ್ರಿಪುರಾಂತಕ ಮಾತನಾಡಿ, ಅಂತಾರಾಷ್ಟ್ರೀಯಮಟ್ಟದಲ್ಲಿಯೇ ಭಾರತೀಯ ಶುಶ್ರೂಷಕರು ಮಾನವೀಯ ಮೌಲ್ಯಗಳಿಗೆ ಹೆಸರಾಗಿರುವುದು ವಿಶೇಷ ಎಂದರು. ಡಾ. ಎಸ್.ಪಿ. ಯೋಗಣ್ಣ ಅಧ್ಯಕ್ಷತೆ ವಹಿಸಿದ್ದರು. ಸುಯೋಗ್ ನರ್ಸಿಂಗ್ ಕಾಲೇಜು ಶೇ. 96ರಷ್ಟು ಫಲಿತಾಂಶ ಪಡೆದಿದ್ದು, ಶೇ. 20ರಷ್ಟು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಅನ್ನು, ಶೇ. 10 ವಿದ್ಯಾರ್ಥಿಗಳು ವಿಷಯವಾರು ರ್‍ಯಾಂಕ್‌ಗಳನ್ನು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ ಪಡೆದಿದ್ದು, ಅವರನ್ನು ಸನ್ಮಾನಿಸಲಾಯಿತು.

ಅತಿ ಹೆಚ್ಚು ಅಂಕಗಳಿಸಿದ ಇಬ್ಬರು ವಿದ್ಯಾರ್ಥಿಗಳಿಗೆ ಡಾ. ಯೋಗ ಸುಧಾ ಮತ್ತು ಡಾ. ಎನ್.ಎಸ್. ರಾಮೇಗೌಡ ವಿದ್ಯಾರ್ಥಿವೇತನಗಳನ್ನು ವಿತರಿಸಿದರು.

ಸಂಸ್ಥೆಯ ಸಿಇಎಂಡಿ ಆರ್. ರಾಜೇಂದ್ರ ಪ್ರಸಾದ್, ಉಪಾಧ್ಯಕ್ಷ ಸೀಮಾ ಯೋಗಣ್ಣ, ಟ್ರಸ್ಟಿಗಳಾದ ಸುಧಾ ಯೋಗಣ್ಣ, ಸುಯೋಗ್ ಯೋಗಣ್ಣ, ಪ್ರಾಂಶುಪಾಲ ಟಿ. ನಾಗಮಣಿ ಹಾಗೂ ಎಂ.ಎಸ್. ಸಂಗೀತ ಇದ್ದರು.

ನೀರಾವರಿ ಜಾಗ ನಿಮ್ಹಾನ್ಸ್‌ಗೆ ಹೇಗೆ ಸೂಕ್ತ: ಉಗ್ರನರಸಿಂಹೇಗೌಡ ಪ್ರಶ್ನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರಿನ ವರ್ತುಲ ರಸ್ತೆ ಪಕ್ಕ ದಕ್ಷಿಣಕ್ಕೆ ಹಳ್ಳದಲ್ಲಿ ಇರುವ ಕಡು ಬೇಸಿಗೆಯಲ್ಲೂ ನೀರಾಡುವ, ಮಳೆಗಾಲದಲ್ಲಿ ಸದಾ ನೀರು ಜಿನುಗುವ, ಸರ್ಕಾರಕ್ಕೆ ಸೇರಿದ್ದು ಎಂಬ ಒಂದೇ ಕಾರಣಕ್ಕೆ, ವಿಮಾನ ನಿಲ್ದಾಣದ ಪಕ್ಷದಲ್ಲೇ ಇರುವ, ಕಳೆದ ಅರವತ್ತು ವರ್ಷಗಳಿಂದ ಐವತ್ತಕ್ಕೂ ಹೆಚ್ಚು ಕುಟುಂಬಗಳ ಜೀವನಾಧಾರವಾಗಿರುವ ಗದ್ದೆ ಭೂಮಿಯಲ್ಲಿ ನಿರ್ಮಿಸಲು ಹೊರಟಿರುವ ನರ ರೋಗ ಸಂಬಂಧಿ ಆಸ್ಪತ್ರೆಗೆ ಯಾವ ಮಾನದಂಡ ಗಳಿಂದಲೂ ಯೋಗ್ಯ ಜಾಗವಲ್ಲ ಎಂದು ಪ್ರಗತಿಪರ ಮುಖಂಡ ಉಗ್ರ ನರಸಿಂಹೇಗೌಡ ಹೇಳಿದ್ದಾರೆ.

ಮೈಸೂರಿನ ಎಲ್ಲಾ ಜೀವಪರ ಜನಪರ ಸಂಘಟನೆಗಳ ಗೆಳೆಯರಿಗೆ ಯಾವುದೇ ಪೂರ್ವಗ್ರಹಗಳಿಲ್ಲದೆ ಅನ್ನಿಸಿದೆ. ಈ ಕಾರಣದಿಂದ ಗುಡುಮಾದನಹಳ್ಳಿಯ ಗದ್ದೆ ಬಯಲಿನಲ್ಲಿ ನಿರ್ಮಿಸಲು ಹೊರಟಿರುವ ನಿಮ್ಹಾನ್ಸ್ ಸಂಕೀರ್ಣವನ್ನು ಉದ್ದೇಶಿತ ಸ್ಥಳದಿಂದ ಎರಡು ಕಿ.ಮೀ. ದೂರದ ಎತ್ತರದ ಒಣ ಪ್ರದೇಶದಲ್ಲಿ ನಿರ್ಮಿಸುವ ಮೂಲಕ ಸೂಕ್ತ ಪ್ರಶಾಂತ ವಾತಾವರಣ ಆಸ್ಪತ್ರೆಗೆ ಒದಗಿಸುವ ವಿವೇಕದ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಪ್ರೀತಿಯಿಂದ ಆಗ್ರಹಿಸುತ್ತಿದೆ.

ಕಳೆದ ಎರಡು ತಿಂಗಳಿಂದಲೂ ಹಲವು ಪ್ರತಿಭಟನೆಗಳು ನಡೆದು, ನಿರಂತರ ಜಲ ಜಿನುಗುವ ಭೂ ಪ್ರದೇಶವನ್ನು ಆಸ್ಪತ್ರೆಯ ನಿರ್ಮಾಣಕ್ಕೆ ನಿಗದಿಪಡಿಸಿರುವ ಶಾಸಕ ಯತೀಂದ್ರ ಸಿದ್ದರಾಮಯ್ಯ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪರ ಜೊತೆ ಜಿಲ್ಲಾಡಳಿತವು, ವಿವೇಕ ಜನಾಗ್ರಹ ವೈಜ್ಞಾನಿಕತೆ ಮತ್ತು ಸಾಮಾನ್ಯ ಜ್ಞಾನ ಕಳೆದುಕೊಂಡು ಜಿದ್ದಿಗೆ ಬಿದ್ದಿರುವ ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ಎಲ್ಲಾ ಸಂಘಟನೆಗಳು ಒಕ್ಕೊರಲಿನಿಂದ ವಿರೋಧಿಸುತ್ತವೆ ಎಂದು ತಿಳಿಸಿದ್ದಾರೆ.

ವಸತಿ ನಿವೇಶಗಳ ಅಕ್ರಮ ನೋಂದಣಿ: ಉಪ ನೋಂದಣಾಧಿಕಾರಿ ಅಮಾನತು

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ತಾಲೂಕು ಕೇರ್ಗಳ್ಳಿಯ 24 ವಸತಿ ನಿವೇಶಗಳ ಅಕ್ರಮ ನೋಂದಣಿಗೆ ಸಂಬಂಧಿಸಿದಂತೆ ಮೈಸೂರು ಪಶ್ಚಿಮ ಉಪ ನೋಂದಣಾಧಿಕಾರಿ ಎನ್. ಶ್ರೀಕಾಂತ್ ಅವರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿ, ಇಲಾಖಾ ತನಿಖೆ ಆರಂಭಿಸಿದೆ.

ಸರ್ಕಾರದ ಸುತ್ತೋಲೆಗಳು ಹಾಗೂ ಇಲಾಖಾ ನಿರ್ದೇಶನಗಳನ್ನು ಉಲ್ಲಂಘಿಸಿ, ನ್ಯಾಯಾಲಯದ ಆದೇಶವನ್ನು ದುರುಪಯೋಗ ಪಡಿಸಿಕೊಂಡಿರುವ ಆರೋಪದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಈ ಪ್ರಕರಣ ಡಿಸೆಂಬರ್2025ರಲ್ಲಿ ಬೆಳಕಿಗೆ ಬಂದಿದ್ದು, ಬಿಜೆಪಿ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು ತಮ್ಮ ಕೇರ್ಗಳ್ಳಿಯ ಚಾಮುಂಡಿ ಸೂರು ನಗರ ಲೇಔಟ್ ಸೈಟ್ ಗಳನ್ನು ಅನ್ಯರಹೆಸರಲ್ಲಿಅಕ್ರಮವಾಗಿನೋಂದಾಯಿಸಲಾಗುತ್ತಿದೆ ಎಂದು ಆರೋಪಿಸಿದ್ದರು. ಉಪ ನೋಂದಣಾಧಿಕಾರಿ ಕಚೇರಿಗೆ ಧಾವಿಸಿ, ದಾಖಲೆಗಳಲ್ಲಿ ತಿರುಚಲಾಗಿದೆ ದೂರು ನೀಡಿದ್ದರು. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸರ್ಕಾರಕ್ಕೂ ಕಠಿಣ ಕ್ರಮಕ್ಕೆ ಮನವಿ ಸಲ್ಲಿಸಲಾಗಿತ್ತು. ಜಿಲ್ಲಾನೋಂದಣಿ ಕಚೇರಿ ನಡೆಸಿದ ತನಿಖೆಯಲ್ಲಿ ದಾಖಲೆ ಅಪ್ ಲೋಡ್ ಮಾಡುವಾಗ ಆರ್ಟಿಕಲ್ ಸೇಲ್ ಆಯ್ಕೆ ಮಾಡಿದ್ದರೂ ಸಬ್ ಆರ್ಟಿಕಲ್ ವಿಭಾಗದಲ್ಲಿ ನ್ಯಾಯಾಲಯದ ಆದೇಶಗಳಂತೆ ನಮೂದು ಮಾಡಿ 24 ಸೈಟ್‌ಗಳ ನೋಂದಣಿ ನಡೆಸಲಾಗಿದೆ ಎಂದು ಪತ್ತೆಯಾಗಿದೆ. ಇದರಿಂದ ಇ-ಸ್ವತ್ತು ಸಾಫ್ಟ್‌ವೇರ್ ನಿಂದ ಮಾಲೀಕತ್ವದ ವಿವರಗಳನ್ನು ಪಡೆಯುವ ಕಡ್ಡಾಯ ಕ್ರಮ ತಪ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಶ್ರೀಕಾಂತ್ ಅಮಾನತುಗೊಳಿಸಿದೆ.

ಭಾವಚಿತ್ರಕ್ಕೆ ಪುಷ್ಪಾರ್ಚನೆ | ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ ಅಭಿಪ್ರಾಯ

ಹಂಸಲೇಖ ಹಾಡುಗಳು ಜನರ ವಯಸ್ಸು ಮರೆಸುತ್ತವೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಾದಬ್ರಹ್ಮ ಹಂಸಲೇಖ ಅವರ ಗೀತ-ಸಂಗೀತಗಳು ಜನರಮನದಲ್ಲಿಮನೆಮಾಡಿದೆ. 76ನೇ ಹೊಸ್ತಿಲಲ್ಲಿರುವ ಹಂಸಲೇಖ ಅವರು ಹಾಡುಗಳನ್ನು ಕೇಳುವವರು ತಮ್ಮ ವಯಸ್ಸನ್ನು ಮರೆಯುತ್ತಾರೆ. ಹಂಸಲೇಖರ ಕ್ಲಾಸಿಕ್ ಹಾಡುಗಳನ್ನು ಆಲಿಸುವಾಗ ಭಾವದಲ್ಲಿ ತಲ್ಲೀನರಾಗುತ್ತೇವೆ ಎಂದು ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ ಹೇಳಿದರು.

ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನದ ಅಂಗವಾಗಿ ಆಯೋಜಿಸಿದ್ದ ನಾಲ್ವಡಿ ನಾಡಿನಲ್ಲಿ ನಾದಬ್ರಹ್ಮ ಹಂಸಲೇಖ ಅವರ ಸಿನಿಮಾಸಾಹಿತ್ಯಸಂವಾದಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆದು, ನಾಲ್ವಡಿ ಕೃಷ್ಣರಾಜ ಒಡೆಯರ್‌ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನ ದಿನದಂದು ನಾದಬ್ರಹ್ಮನ ನೆಪದಲ್ಲಿ ನಾಲ್ವಡಿಯವರನ್ನು ಸ್ಮರಿಸುತ್ತಿದ್ದೇವೆ. ನಾಲ್ವಡಿಯವರು ಮಹಾರಾಜರು. ಹಂಸಲೇಖ ಒಂದು ಕಾಲದ ರಾಜರೇ. ಅವರ ಹಂಸಲೇಖ ಆಗುವ ಮುನ್ನ ಗಂಗರಾಜ. ಇದು ಚರಿತ್ರೆಯೂ ಹೊಸ ಕಾಲದಲ್ಲಿ ಮರಕಳುಹಿಸುತ್ತದೆ ಎಂಬುದಕ್ಕೆ ಉದಾಹರಣೆಯಂತಿದೆ ಎಂದರು.

1980ರ ದಶಕದಲ್ಲಿ ಪ್ರೇಮದ ಅಭಿವ್ಯಕ್ತಿಗೆ ಹೊಸ ಆಯಾಮ ತೋರಕಿಸಿಕೊಟ್ಟ ಸಿನಿಮಾ ಪ್ರೇಮಲೋಕ. ರವಿಚಂದ್ರನ್ ಮತ್ತು ಹಂಸಲೇಖ ಅವರು ಭಾರತೀಯ ಸಿನಿಮಾಕ್ಕೆ ಕನ್ನಡ ಚಿತ್ರರಂಗದ ಹಿರಿಮೆಯನ್ನು ಪರಿಚಯಿಸಿದ ಸಿನಿಮಾ ಪ್ರೇಮಲೋಕ. ಹಂಸಲೇಖ ಅವರ ಪ್ರೇಮಲೋಕದಿಂದ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಹಾಡಿನವರೆಗೆ ಕ್ಲಾಸಿಕ್ ಹಾಡುಗಳು ಕನ್ನಡಿಗರ ಮನಗೆದ್ದಿವೆ. ಹಾಗೆಯೇ ಹಂಸಲೇಖ ಅವರು ಕೆಲವು ಗೀತೆಗಳಿಗೆ ವಿಮರ್ಶೆ ಎದುರಿಸಿದ್ದಾರೆ ಎಂದರು.



ಎಂಜಿನಿಯರ್ಸ್‌ಗಳ ಸಂಸ್ಥೆಯಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ವತಿಯಿಂದ ಕಸಾಪ ಸಂಸ್ಥಾಪನಾ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ ಉದ್ಘಾಟಿಸಿದರು.

> ▪ ನಾಲ್ವಡಿ ನಾಡಿನಲ್ಲಿ ನಾದಬ್ರಹ್ಮ ಹಂಸಲೇಖ ಅವರ ಸಿನಿಮಾ ಸಾಹಿತ್ಯ ಸಂವಾದ ಕಾರ್ಯಕ್ರಮ
> ▪ ನಾಲ್ವಡಿಯವರು ಮಹಾರಾಜರು. ಹಂಸಲೇಖ ಒಂದು ಕಾಲದ ರಾಜರೇ..

ಪ್ರಾಸ್ತಾವಿಕವಾಗಿ ಮಾತನಾಡಿದ ಆರ್. ರವಿ ಕುಮಾರನಪುರ, ಸಮಾಜಮುಖಿ ಚಿಂತನೆಯ ಸಾಹಿತಿಗೆ ಯಾವುದೇ ಜಾತಿ ಧರ್ಮಗಳಿಲ್ಲ. ಅವರು ಕಾಲ ದೇಶವನ್ನು ಮೀರಿದವರು. ಬಾಬಾ ಸಾಹೇಬರು ಹಿಡಿದ ಪೆನ್ನು ದೇಶಕ್ಕೆ ಊರುಗೋಲಾಯಿತು. ಸಾಹಿತಿಗಳ ಪೆನ್ನು ಮನಸ್ಸು ಕಟ್ಟಬೇಕಿತ್ತು. ಹೊಡೆಯುತ್ತಿದೆ. ಕಟ್ಟುವ ಪ್ರಕ್ರಿಯೆಯಲ್ಲಿ ಹಂಸಲೇಖರ ಸಾಹಿತ್ಯ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಅಧ್ಯಕ್ಷತೆ ವಹಿಸಿದ್ದರು. ಹಂಸಲೇಖ ಸಾಹಿತ್ಯದಲ್ಲಿ ಪ್ರಕೃತಿ-ಪರಿಸರ ಪ್ರೇಮ ವಿಷಯವನ್ನು ಹಾಸನ ಆಕಾಶವಾಣಿ ನಿವೃತ್ತ ಮುಖ್ಯಸ್ಥ ಎಂ. ಶಿವಕುಮಾರ್, ಹಂಸಲೇಖ ಸಾಹಿತ್ಯದಲ್ಲಿ ದೇಸಿಯತೆ ಕುರಿತು ಡಾ. ಕೃಷ್ಣಮೂರ್ತಿ ಚಮರಂ, ಹಂಸಲೇಖರ ಸಂಗೀತ ಮತ್ತು ಒಡನಾಟ ಕುರಿತು ಆರ್. ಮಹೇಂದರ್, ಹಂಸಲೇಖರು ಬೆಳೆದುಬಂದ ಹಾದಿ ಕುರಿತು ಗಾನಾಸುಮಾ ಪಟ್ಟಸೋಮನಹಳ್ಳಿ ಮಾತಾಡಿದರು. ಸಂವಾದದಲ್ಲಿ ಸಾಹಿತಿ ಸ್ವಾಮಿ ಪೊನ್ನಾಚಿ, ಬರಹಗಾರ ರಾಘವೇಂದ್ರ ಅಪುರಾ, ಕವಿ ಮಹೇಶ್ ಇರಸವಾಡಿ, ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ಖಜಾಂಚಿ ಸವಿತಾ ಎಸ್. ಗೌಡ, ಕರವೇ ರಾಜ್ಯ ಯುವ ಘಟಕದ ಅಧ್ಯಕ್ಷ ಸಂಜಯ್ ಲೋಹಿತಾಶ್ವ ಭಾಗವಹಿಸಿದ್ದರು. ಸತೀಶ್ ಹೆಗ್ಗೂರುಪ್ರಾಸ್ತಾವಿಕವಾಗಿಮಾತನಾಡಿದರು. ಕವಯತ್ರಿ ನಂದಾದೀಪ ನಿರೂಪಿಸಿದರು.

ನಾಳೆ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ಉಪನ್ಯಾಸ

• **ಕನ್ನಡಪ್ರಭ ವಾರ್ತೆ** ಮೈಸೂರು

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸವನ್ನು ಮೇ 7ರ ಬೆಳಗ್ಗೆ 10ಕ್ಕೆ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಏರ್ಪಡಿಸಿದೆ.



ಆರ್‌ಎಸ್‌ಎಸ್ ಸರ ಸಂಚಾಲಕ ಮೋಹನ್ ಭಾಗವತ್ ಆಗಮನ

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯ ಕ್ರಮ ನೆರವೇರಲಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಸಂಚಾಲಕ ಮೋಹನ್ ಭಾಗವತ್ ಅವರು ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ವಿಷಯ ಕುರಿತು ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ನೀಡುವರು. ಉಪನ್ಯಾಸದ ನಂತರ ಪ್ರಶ್ನೋತ್ತರಕ್ಕೆ ಅವಕಾಶವಿರುತ್ತದೆ. ಮುದ್ದೇನಹಳ್ಳಿ ಸತ್ಯ ಸಾಯಿ ಆಶ್ರಮದ ಸದ್ಗುರು ಶ್ರೀ ಮಧುಸೂದನ ಸಾಯಿಯವರು ನೀಡಿದ್ದ 14ನೇ ವಿಶೇಷ ಉಪನ್ಯಾಸದ 'ಆತ್ಮಾನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಕೃತಿಯನ್ನೂ ಮೋಹನ್ ಭಾಗವತ್ ಲೋಕಾರ್ಪಣೆ ಮಾಡುವರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ನೆನಪಿಗಾಗಿ 2004ರಿಂದ ವಿವಿಧ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿರುವ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸಗಳನ್ನು ಪ್ರತಿ ವರ್ಷ ಏರ್ಪಡಿಸಲಾಗುತ್ತಿದೆ.

ಬೆಳಗ್ಗೆ 9.15ರ ನಂತರ ಆಗಮಿಸುವವರು ಸುಗಮ ಸಂಚಾರದ ದೃಷ್ಟಿಯಿಂದ ಪಿಂಜ್ರಾಪೋಲ್ ರಸ್ತೆ ಹಾಗೂ ಅರಮನೆ ಪಂಚಗವಿ ಮಠದ ರಸ್ತೆಯ ಮೂಲಕ ಆಗಮಿಸಿ ಶ್ರೀಮಠವನ್ನು ತಲುಪಬಹುದು.

ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರಿದೆ.

ಮಕ್ಕಳ ಸಮಗ್ರ ಬೆಳವಣಿಗೆಗೆ ಬೇಸಿಗೆ ಶಿಬಿರ ಉಪಯುಕ್ತ: ಡಾ.ಈ.ಸಿ.ನಿಂಗರಾಜ್‌ಗೌಡ

ಅದಮ್ಯ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ | ಮಕ್ಕಳ ಎರಡು ನಾಟಕ ಪ್ರದರ್ಶನ

• **ಕನ್ನಡಪ್ರಭ ವಾರ್ತೆ** ಮೈಸೂರು

ಬೇಸಿಗೆ ಶಿಬಿರಗಳು ಮಕ್ಕಳ ಸಮಗ್ರ ಬೆಳವಣಿಗೆಗೆ ಉಪಯುಕ್ತ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್ ಗೌಡ ಹೇಳಿದರು.

ಅದಮ್ಯ ರಂಗಶಾಲೆಯ ವತಿಯಿಂದ ವಿ.ಕೆ. ಪಬ್ಲಿಕ್ ಸ್ಕೂಲ್ ಸಹಯೋಗದಲ್ಲಿ ನಗರದ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಬಾಲಂಗೋಚಿ' ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಭಾಷಣ ಮಾಡಿದ ಅವರು, ಇಂತಹ ಶಿಬಿರಗಳಲ್ಲಿ ಮಕ್ಕಳ ಆಟ, ಕಲಿಕೆ ಮತ್ತು ಸಂಸ್ಕಾರಗಳನ್ನು ಒಟ್ಟುಗೂಡಿಸುವ ಚಟುವಟಿಕೆಗಳು ನಡೆಯುವುದು ಇದಕ್ಕೆ ಕಾರಣ ಎಂದರು.

ಮಕ್ಕಳಲ್ಲಿ ಆತ್ಮವಿಶ್ವಾಸ,. ತಂಡದಲ್ಲಿ ಕೆಲಸ ಮಾಡುವ ಗುಣ ಬೆಳೆಸುವುದು, ಸಾಂಸ್ಕೃತಿಕಮತ್ತು ನೈತಿಕಮೌಲ್ಯಗಳನ್ನು ಪರಿಚಯಿಸುವುದು ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆ ಆಗುತ್ತದೆ ಎಂದು ಅವರು ಹೇಳಿದರು.

ಚಿತ್ರಕಲೆ, ಕರಕುಶಲ ಕಲೆ,ಯೋಗ ಮತ್ತು ವ್ಯಾಯಾಮ,ನಾಟಕಾಭ್ಯಾಸ, ಕಥೆ ಹೇಳುವಿಕೆ ಮತ್ತು ಪಠಣ, ಸಂಗೀತ, ನೃತ್ಯ ಆಟಗಳು ನಡೆಯುತ್ತವೆ. ಶಿಬಿರದ ಕೊನೆಯಲ್ಲಿ ಮಕ್ಕಳಿಂದ ನಾಟಕ ಪ್ರದರ್ಶನ ನಡೆಸುವುದು ಬಹಳ ಪರಿಣಾಮಕಾರಿ.

ಇದರಿಂದ ಮಕ್ಕಳಲ್ಲಿ ಅಭಿನಯ ಕೌಶಲ್ಯ ಬೆಳೆಸುವುದು. ಸಭಾಕಂಪನ ನಿವಾರಣೆ, ತಂಡದ ಸಹಕಾರ ಮನೋಭಾವ, ನಾಯಕತ್ವ ಗುಣ, ಸಂವಹನ ಕೌಶಲ್ಯ, ಸೃಜನಶೀಲತೆ ಬೆಳೆಯುತ್ತದೆ. ಶಿಸ್ತು ಮತ್ತು ಸಮಯಪಾಲನೆ ಕಲಿಯುತ್ತಾರೆ ಎಂದು ಹೇಳಿದರು.

ವಿಜಯನಗರದ 3ನೇ ಹಂತದ ವಿ.ಕೆ. ಪಬ್ಲಿಕ್ ಶಾಲೆ ಕಾರ್ಯದರ್ಶಿ ರವಿಕುಮಾರ್‌ಬೆಕ್ಕಾ ಅಧ್ಯಕ್ಷತೆವಹಿಸಿದ್ದರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ ಆಶಯ ಭಾಷಣ ಮಾಡಿದರು.

ಅದಮ್ಯ ರಂಗಶಾಲೆಯ ವತಿಯಿಂದ ನೀಡಲಾಗುವ 'ಅದಮ್ಯ ಕಾಯಕಯೋಗಿ ಪ್ರಶಸ್ತಿ'ಯನ್ನು ಮದ್ದೂರು ತಾಲೂಕಿನ ಕೆ.ಎಂ. ದೊಡ್ಡಿಯ ಭಾರತೀ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಸ್.ಎಲ್. ಸುರೇಶ್, ಪತ್ರಕರ್ತ ಗಿರೀಶ್ ಹುಣಸೂರು, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಎಚ್.ಎಲ್. ಯಮುನಾ ಹಾಗೂ ಮೈಸೂರಿನ ತೇಗು ಮೆಸ್ ನ ಮಾಲೀಕ ಟಿ. ಶಾಮ್ ಅವರಿಗೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರದಾನ ಮಾಡಿದರು.

ಇದಲ್ಲದೇ ದ್ವಿತೀಯ ಪಿಯುಸಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಸವೇಶ್ವರನಗರ ಎಎಂಬಿ ಸಂಯುಕ್ತ ಪಿಯು ಕಾಲೇಜಿನ ಎಂ. ಸಂಗೀತ, ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಸಂಘಟನಾ ಕಾರ್ಯದರ್ಶಿ ಸಿ.ಆರ್. ಮಾನಸ, ಸ್ವಯಂ ಸೇವಕಿ ಬಿ. ನಿತ್ಯಶ್ರೀ ಅವರಿಗೆ ಅದಮ್ಯ ಯುವಚೇತನ ಪ್ರಶಸ್ತಿ ಪ್ರದಾನ ಮಾಡಿದರು. ಅದಮ್ಯ ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ , ಸ್ವಾಗತಿಸಿದರು. ಪರಮೇಶ್ ಕೆ. ಉತ್ತನಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಬಸಪ್ಪ ಸಾಲುಂಡಿ, ಡಾ.ಬಿ. ಬಸವರಾಜು, ನಾಗೇಶ್ ಮೊದಲಾದವರು ಇದ್ದರು. ನಂತರ ಬಾಲಂಗೋಚಿ ಚಿಣ್ಣರ ಬೇಸಿಗೆ ಶಿಬಿರದ ಮಕ್ಕಳು ಮಳೆ ಹುಚ್ಚ, ಗುಬ್ಬಿ ಮತ್ತು ಗೋಪಿ ಎರಡು ಮಕ್ಕಳ ನಾಟಕ ಪ್ರದರ್ಶನ ನಡೆಯಿತು.



ಡಾ.ಎಸ್.ಎಲ್. ಸುರೇಶ್, ಬಿ. ಶ್ಯಾಮ್, ಗಿರೀಶ್ ಹುಣಸೂರು ಹಾಗೂ ಎಚ್.ಎಲ್. ಯಮುನಾ ಅವರಿಗೆ ಅದಮ್ಯ ಕಾಯಕಯೋಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮನುಷ್ಯನಲ್ಲಿ ಜ್ಞಾನ ಇದ್ದಾಗ ಮಾತ್ರ ನಾಡು ಉಳಿಯಲು ಸಾಧ್ಯ

ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಉಪನ್ಯಾಸಕ ಸಂತೋಷ್ ಚೊಕ್ಕಾಡಿ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಎಚ್.ಡಿ.ಕೋಟೆ

ಒಬ್ಬ ಮನುಷ್ಯನಲ್ಲಿ ಜ್ಞಾನ ಇದ್ದಾಗ ಮಾತ್ರ ನಾಡು, ನುಡಿ, ನೆಲ, ಜಲ ಉಳಿಯಲು ಸಾಧ್ಯ ಎಂದು ಸಾಹಿತಿ ಬಿ. ಮಟಕೆರೆ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಸಂತೋಷ್ ಚೊಕ್ಕಾಡಿ ತಿಳಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದಲ್ಲಿನ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಮಂಗಳವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆದ 112ನೇ ಸಂಸ್ಥಾಪನಾ ದಿನಾಚರಣೆ ಉದ್ದೇಶಿಸಿ ಅವರು ಮಾತನಾಡಿದರು.

ಇಂದಿನದಿನಗಳಲ್ಲಿ ಕನ್ನಡಿಗರಿಂದಲೇ ಕನ್ನಡವನ್ನು ಕಾಪಾಡಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಕನ್ನಡಿಗರು ಬೇರೆ ಭಾಷಿಕರಿಗೆ ಮಾರು ಹೋಗಿ ಕನ್ನಡವನ್ನೇ ತ್ಯಜಿಸುತ್ತಿದ್ದು, ಇಂತಹವರಿಂದ ಕನ್ನಡವನ್ನು ಕಾಪಾಡಬೇಕಿದೆ ಎಂದರು.

ಕನ್ನಡವು ಕೇವಲ ಭಾಷೆಯಾಗಿ ಉಳಿಯದೆ ನಮ್ಮ ಗುರುತನ್ನು, ನಮ್ಮ ನಡೆಯ ನ್ನು ಸಹ ತೋರುತ್ತದೆ, ನಮ್ಮ ಭಾಷೆಯನ್ನು ಮರೆತಾಗ ನಮ್ಮ ನಡೆ ಮತ್ತು ಗುರುತು ಸಹ ಇಲ್ಲದಂತಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ಅವರು ಶಿಕ್ಷಣಕ್ಕೆ, ಆರ್ಥಿಕತೆಗೆ, ಕಾರ್ಖಾನೆಗಳ ಸ್ಥಾಪನೆಗೆ ಒತ್ತು ನೀಡುವುದರ ಜೊತೆಗೆ ನಾಡು ನುಡಿಗಾಗಿ ಅಪಾರ ಚಿಂತನೆಯನ್ನು ನಡೆಸಿ ಭಾಷೆಯ ಒಳಿತಿಗಾಗಿ ಕನ್ನಡಸಾಹಿತ್ಯ ಪರಿಷತ್ತನ್ನುಸ್ಥಾಪಿಸಿದರು ಎಂದ ರು. ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಹಾಲಕ್ಷ್ಮಿ, ಧನುಶ್ರೀ, ಭುವನಾ, ತೇಜಸ್ವಿನಿ ಮತ್ತು ನಿತ್ಯಶ್ರೀ ಅವರನ್ನು ಅಭಿನಂದಿಸಲಾಯಿತು.ಸರಗೂರು ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಪಪಂ ಅಧ್ಯಕ್ಷೆ ಚೈತ್ರ ಸ್ವಾಮಿ, ಮೋಹನ್‌ಕುಮಾರ್, ನಾಗರಾಮ, ಕಾಲೇಜಿನ ಸಿಬ್ಬಂದಿ ಸಿದ್ದರಾಜು, ಮಹಾದೇವಿ ಇದ್ದರು.



ಬಾಗಲಕೋಟೆ, ದಾವಣಗೆರೆಯಲ್ಲಿ ಕಾಂಗ್ರೆಸ್ ಗೆಲುವು: ಸಂಭ್ರಮಾಚರಣೆ

ಅಗ್ರಹಾರದ 101 ಗಣಪತಿ ದೇವಸ್ಥಾನದ ಬಳಿ ಸಿಹಿ ವಿತರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜ್ಯದಲ್ಲಿ ನಡೆದ ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅತಿ ಹೆಚ್ಚು ಬಹುಮತದಿಂದ ಗೆಲುವು ಸಾಧಿಸಿರುವುದು ಪಕ್ಷಕ್ಕೆ ಇನ್ನಷ್ಟು ಬಲ ಬಂದಿದೆ ಎಂದು ಕೆಪಿಸಿಸಿ ಸದಸ್ಯ ನಜರಬಾದ್ ನಟರಾಜ್ ತಿಳಿಸಿದ್ದಾರೆ.

ಅಗ್ರಹಾರದ101 ಗಣಪತಿದೇವಸ್ಥಾನದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪೂಜೆ ಸಲ್ಲಿಸಿ ನಂತರ ಸಿಹಿ ವಿತರಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿ ಮಾತನಾಡಿದ ಅವರು, ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ವಾಮ ಮಾರ್ಗದ ಮೂಲಕ ಚುನಾವಣೆ ತಂತ್ರ ಬಳಸಿ ಗೆಲ್ಲಲು ಪ್ರಯತ್ನಿಸಿದರು. ಮತದಾರ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ಒಪ್ಪಿಕೊಂಡು ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಕ್ಷಕ್ಕೆ ಇನ್ನಷ್ಟು ಶಕ್ತಿ ತುಂಬಿದ್ದಾರೆ ಎಂದರು.

ಈ ವೇಳೆ ನಜರಬಾದ್ ನಟರಾಜ್, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಮೈಸೂರು ನಗರ ಉಪಾಧ್ಯಕ್ಷ ರಾಮಪ್ಪ ರಮೇಶ್, ಅಖಿಲ ಕರ್ನಾಟಕ ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್, ಲೋಕೇಶ್, ಕೃಷ್ಣಪ್ಪ ಗಂಟಯ್ಯ, ದಿನೇಶ್, ಗುಂಡಪ್ಪ, ಕನಕ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ರವಿಚಂದ್ರ, ಎಸ್.ಎನ್. ರಾಜೇಶ್,ರಾಕೇಶ್,ನಿತಿನ್‌ಮೊದಲಾದವರು ಇದ್ದರು.

ಕಲ್ಲು ಎತ್ತಿಹಾಕಿ ಕೂಲಿಯಾಳು ಕೊಲೆ

• **ಕನ್ನಡಪ್ರಭ ವಾರ್ತೆ** ಮೈಸೂರು

ತಲೆ ಮೇಲೆ ಕಲ್ಲು ಚಪ್ಪಡಿ ಎತ್ತಿ ಹಾಕಿ ಕೂಲಿ ಕಾರ್ಮಿಕನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಕೆ.ಎನ್. ಪುರ ಬಳಿ ಮಂಗಳವಾರ ನಡೆದಿದೆ. ಗೌಸಿಯಾ ನಗರದ ನಿವಾಸಿ, ಕೂಲಿ ಕಾರ್ಮಿಕ ಮಹಮ್ಮದ್ ಉಮರ್(37) ಮೃತ ವ್ಯಕ್ತಿ. ಬೆಳಗಿನ ಜಾವ ಉಮರ್‌ಅವರ ತಲೆಯ ಮೇಲೆ ದುಷ್ಕರ್ಮಿಗಳು ಚಪ್ಪಡಿ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾರೆ ಎಂದು ಮೃತನ ಸೋದರ ಮಹಮ್ಮದ್ ಜಾರ್‌ದೂರು ನೀಡಿದ್ದು, ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ತಂತಿ ಕಳವು

• **ಕನ್ನಡಪ್ರಭ ವಾರ್ತೆ** ಮೈಸೂರು

ಬಡಾವಣೆಯೊಂದರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅಳವಡಿಸಿದ್ದ 2.5 ಲಕ್ಷ ರು. ಮೌಲ್ಯದ ವಿದ್ಯುತ್ ತಂತಿ ಕಳವಾಗಿದೆ. ಮೈಸೂರು ತಾಲೂಕಿನ ಭುಗತಹಳ್ಳಿ ಗ್ರಾಮದಲ್ಲಿನ ಗ್ರೀನ್ ಕೌಂಟಿ ಬಡಾವಣೆಯಲ್ಲಿ ಈ ಘಟನೆ ನಡೆದಿದೆ. ಬಡಾವಣೆಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ 2.5 ಕಿ.ಮೀ. ಉದ್ದದ ತಂತಿಯನ್ನು ಅಳವಡಿಸಲಾಗಿದ್ದು, ಯಾರೋ ಕಳ್ಳರು ವಿದ್ಯುತ್ ತಂತಿಯನ್ನು ಕಳವು ಮಾಡಿದ್ದಾರೆ ಎಂದು ಬಡಾವಣೆ ಮಾಲೀಕ ವಜ್ರಮುನಿ ದೂರು ನೀಡಿದ್ದು, ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಾಟಕದ ಪ್ರಜ್ಞೆ ಜನರ, ರೈತರ ಶ್ರಮ ಅರ್ಥೈಸುತ್ತದೆ'

• **ಕನ್ನಡಪ್ರಭ ವಾರ್ತೆ** ಮೈಸೂರು

ನಾಟಕದ ಭಾವ ಪ್ರಜ್ಞೆ ಇದ್ದಾಗ ಜನರ ಕಷ್ಟ, ರೈತರ ಶ್ರಮ ಅರ್ಥವಾಗುತ್ತದೆ ಎಂದು ಆಹಾರ ವಿಜ್ಞಾನಿ ಶ್ರೀಮತಿ ಹರಿಪ್ರಸಾದ್ ಅಭಿಪ್ರಾಯಪಟ್ಟರು.

ರಂಗಾಯಣದ ವನರಂಗದಲ್ಲಿ ಮಂಗಳವಾರ ಚಿಣ್ಣರ ಮೇಳದ ಮಕ್ಕಳ ನಾಟಕೋತ್ಸವ ಉದ್ಘಾಟಿಸಿ ಮತ್ತು ರಂಗ ಗೌರವ ಸ್ವೀಕರಿಸಿ ಮಾತನಾಡಿ, ನಾಟಕಗಳು ಕೇವಲ ಮನರಂಜನೆ ಆಗಿರದೆ ಪ್ರತಿಭಟನೆಯ ಅಭಿವ್ಯಕ್ತಿ. ಅದರಲ್ಲಿ ಭಾವಪ್ರಜ್ಞೆ ಇದ್ದಾಗ ಜನರ ಕಷ್ಟ, ರೈತರ ಶ್ರಮ ಅರ್ಥವಾಗುತ್ತದೆ. ಬೀದಿ ನಾಟಕಗಳಲ್ಲಂತು ಸಮಾಜದ ಸಮಸ್ಯೆ, ತಾರತಮ್ಯ, ಜನರ ನೋವನ್ನು ಅಧಿಕಾರಸ್ಥರಿಗೆ ತಿಳಿಸಬಹುದು ಎಂದರು.

ರೈತರು, ಕಾರ್ಮಿಕರ ಬೆವರಿನ ಬೆಲೆಯನ್ನು ವಿವರಿಸುತ್ತಿದ್ದರು. ನಾಟಕದ ಭಾವ ಪ್ರಜ್ಞೆ ಇದ್ದರೆ ಜನರ ಕಷ್ಟ, ರೈತರ ಶ್ರಮ ಗೊತ್ತಾಗುತ್ತದೆ. ನಾನು ಚಿಕ್ಕವಳಿದ್ದಾಗ ನನ್ನ ತಾಯಿಯವರು ತಟ್ಟೆಯಲ್ಲಿ ಅನ್ನ ಬಿಟ್ಟರೆ ಅದು ಅಳುತ್ತದೆ ಎನ್ನುತ್ತಿದ್ದರು. ಅಂತಹ ಪ್ರಜ್ಞೆಯನ್ನು ಮಕ್ಕಳಲ್ಲಿ ಮೂಡಿಸಬೇಕು ಎಂದರು.



ಮೈಸೂರಿನ ರಂಗಾಯಣದ ವನರಂಗದಲ್ಲಿ ಚಿಣ್ಣರ ಮೇಳದ ಮಕ್ಕಳ ನಾಟಕೋತ್ಸವವನ್ನು ವಿಜ್ಞಾನಿ ಶ್ರೀಮತಿ ಹರಿಪ್ರಸಾದ್‌ಉದ್ಘಾಟಿಸಿದರು.

ಕಾವ್ಯಕ್ಕಿಂತಲೂ ನಾಟಕ ರಮ್ಯವಾದದ್ದು, ನಟರಿಗೆ ಪರಕಾಯ ಪ್ರವೇಶ ಪಡೆಯುವ ಅವಕಾಶದೊಂದಿಗೆ ದಿವ್ಯಾನುಭೂತಿ ನೀಡುತ್ತದೆ ಎಂದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿದರು. ಉಪ ನಿರ್ದೇಶಕ ಎಂ.ಡಿ. ಸುದರ್ಶನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗ ಸಮಾಜದ ಸದಸ್ಯರಾದ ಸುರೇಶ್ ಬಾಬು, ಡಿಂಗ್ರಿ ನರೇಶ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಜಾಹಿದಾ, ಶಿಬಿರದ ಸಂಚಾಲಕ ಸಂತೋಷ್ ದಿಂಡಗೂರು, ಶಿಕ್ಷಕ ಯತೀಶ್ ಎನ್. ಕೊಳ್ಳೇಗಾಲ ಸೇರಿದಂತೆ ಇತರರು ಇದ್ದರು.